# ಇತಿಹಾಸ ದರ್ಶನ

## ೨೦೨೦




ಸಂಪಾದಕರು

**ದೇವರಕೊಂಡಾರೆಡ್ಡಿ**

**ಜಿ.ಕೆ. ದೇವರಾಜಸ್ವಾಮಿ**


**ಸಂಪುಟ ೩೫**


**ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು**





ISBN: 978-81-950402-1-6

www.karnatakaitihasaacademy.org
karnatakaitihasaacademy25@gmail.com
youtube.com/c/karnatakaitihasaacademy
karnatakaitihasaacademy

# ಇತಿಹಾಸ ದರ್ಶನ

**ITIHASA DARSANA** - *Volume 35 / 2020*

ಸಂಪುಟ ೩೫ / ೨೦೨೦

೨೦೧೯ರ ಅಕ್ಟೋಬರ್ ೧೮ರಿಂದ ೨೦ರವರೆಗೆ ಕರ್ನಾಟಕ ಇತಿಹಾಸ ಅಕಾದೆಮಿ(ರಿ) ಹಾಗೂ
ಶ್ರೀ ಹೊಂಬುಜ ಜೈನ ಮಠದ ಆಶ್ರಯದಲ್ಲಿ
ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾದೆಮಿಯ ೩೩ನೆಯ ವಾರ್ಷಿಕ ಸಮ್ಮೇಳನದಲ್ಲಿ
ಅಕಾದೆಮಿಯ ಸದಸ್ಯರು ಮಂಡಿಸಿದ ವಿದ್ವತ್ ಪ್ರಬಂಧಗಳ ಸಂಪುಟ.


ಸಂಪಾದಕರು

**ದೇವರಕೊಂಡಾರೆಡ್ಡಿ**

**ಜಿ.ಕೆ. ದೇವರಾಜಸ್ವಾಮಿ**



**ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು**

# ITIHĀSA DARŚANA - *Volume 35* / 2020

The volume of the scholarly papers presented and
Proceedings of the 33nd Annual Conference

**The Karnataka Ithihasa Academy** (Regd.,)
**Sri Hombuja Jain Math**
Humcha, Hosanagara Taluk, Shimoga District

on 18th, 19th & 20th October 2019

**Published by** : Secretary
Karnataka Itihasa Academy (Regd.)
B.M. Sri Pratistana, 3rd Main Road,
Narasimharaja Colony, Bengaluru - 560 019.

**karnatakaitihasaacademy25@gmail.com**

**www.karnatakaitihasaacademy.org**

Edited by : **Devarakondareddy**
**G.K. Devarajaswamy**



© **Authors. ಆಯಾ ಲೇಖಕರದು**



ಪುಟಗಳು : 588 + xxiv + Col. Photos xvi

Pages : 588 + xxiv + Col. Photos xvi

Price : ₹ **900**

ಬೆಲೆ : ₹ ೯೦೦

**ಆರ್ಥಿಕ ನೆರವು:**

ದಿ. ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಂಗಳೂರು.
ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೇಹೊನ್ನೂರು.
ಶ್ರೀ ಪರಮಪೂಜ್ಯ ಸಂಗನಬಸವ ಮಹಾಸ್ವಾಮಿಗಳು, ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ, ಬಾದಾಮಿ.

Printed at

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA Bangalore
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೬೭೧ ೩೧೨೩, ೨೬೭೧ ೮೭೫೨

# ಪರಿವಿಡಿ


| | | | |
|---|---|---|---|
| ೧. | ತುರುವನಹಳ್ಳಿಯ ಕರ್ನಾಟಕದ ಮೊದಲ ಪ್ರಾಗೈತಿಹಾಸಿಕ ಜಿಂಕೆ ಪ್ರಸವದ ವರ್ಣಚಿತ್ರ | ರೇಣುಕಾಸ್ವಾಮಿ ಒಡೆಯರ್ | ೧ |
| ೨. | ಹಾಯಿಮ್ಮ ಬಂಡೆ ನೆಲೆಯ ವರ್ಣಚಿತ್ರ ಶೋಧ: ಏಣೆಯ ಪ್ರಾಚೀನತೆ | ಆರ್. ಮೋಹನ | ೪ |
| ೩. | ಮತ್ತ್ರಿ ಗ್ರಾಮದ ನವಶೋಧಿತ ಬೂದಿದಿಬ್ಬ ಹಾಗೂ ಬಯಲುಬಂಡೆ ಚಿತ್ರಗಳು | ಕೆ. ಲಿಂಗಣ್ಣಸ್ವಾಮಿ | ೧೦ |
| ೪. | ಗಂಗಾವತಿ ಪ್ರದೇಶದ ರಾಮದುರ್ಗ ಬೂದಿದಿಬ್ಬ: ಹೊಸ ಶೋಧನೆ | ಶರಣಬಸಪ್ಪ ಕೋಲ್ಕಾರ್ | ೧೬ |
| ೫. | ಏತಲಾಪುರದ ಬೂದಿದಿಬ್ಬ ಶೋಧ | ಗೀತಾ ಪಾಟೀಲ | ೨೧ |
| ೬. | ಅರ್ಕಾವತಿ ನದಿ ಕಣಿವೆಯ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳು ಮತ್ತು ಭೂದೃಶ್ಯ | ಕೆ. ಪ್ರವೀಣ್‌ಕುಮಾರ್ | ೨೫ |
| ೭. | ಚಾಮರಾಜನಗರ ಜಿಲ್ಲೆಯಲ್ಲಿನ ಬೃಹತ್ ಶಿಲಾಯುಗ ಸಮಾಧಿಗಳು: ಹೊಸ ಶೋಧ | ಎಚ್. ಶಾಂತರಾಜು | ೩೪ |
| ೮. | ಕುಮ್ಮಟದುರ್ಗ ಮತ್ತು ಆಚಲಾಪುರ ಪರಿಸರದ ಬೃಹತ್ ಶಿಲಾಯುಗದ ಸಮಾಧಿಗಳು | ಹೆಚ್.ಎಂ. ತಿಪ್ಪೇಶ | ೩೮ |
| ೯. | ತುಮಕೂರು ಜಿಲ್ಲೆಯ ಕೆಲವು ಪ್ರಾಚೀನ ಕಬ್ಬಿಣ ತಯಾರಿಕಾ ನೆಲೆಗಳು | ಕೆ.ಪಿ. ಶಶಿಕುಮಾರ ನಾಯ್ಕ | ೪೪ |
| ೧೦. | ಹಾಡೋನಹಳ್ಳಿಯ ನೂತನ ಶಿಲಾಯುಗ ಪ್ರಾಚ್ಯಾವಶೇಷಗಳ ಶೋಧ | ಪ್ರವೀಣ್ ದೊಡ್ಡಗೌಡ್ರ | ೪೭ |
| ೧೧. | ಬಂಡೀಪುರ ರಾಷ್ಟ್ರೀಯ ಉದ್ಯಾನವನ ಹಾಗೂ ನಾಗರಹೊಳೆಯಲ್ಲಿನ ಶಿಲಾಯುಗ ಸಂಸ್ಕೃತಿ | ಎಸ್.ಜಿ. ರಾಮದಾಸ ರೆಡ್ಡಿ | ೫೨ |
| ೧೨. | ಜಡಮಡುಗು ಅಕ್ಕಮ್ಮ ಬೆಟ್ಟದಲ್ಲಿ ಬೃಹತ್ ಶಿಲಾಯುಗದ ನೆಲೆ ಶೋಧ | ಬಿ.ಆರ್. ಕೃಷ್ಣ | ೫೭ |
| ೧೩. | ಅಮ್ಮನಘಟ್ಟ ಪರಿಸರದ ಪ್ರಾಗೈತಿಹಾಸಿಕ ನೆಲೆಗಳು | ಎ.ಜಿ. ಶ್ರೀನಿವಾಸ | ೬೨ |
| ೧೪. | ಕರಾವಳಿ ಕೊಡಗು ಮತ್ತು ಮಲೆನಾಡಿನ ಪುರಾತತ್ವ ಶೋಧಗಳು | ಮುರುಗೇಶಿ | ೬೫ |
| ೧೫. | ಅಂಕೋಲಾ ತಾಲ್ಲೂಕಿನ ಮೂರು ಅಪ್ರಕಟಿತ ಶಾಸನಗಳು | ಶ್ಯಾಮಸುಂದರ ಟಿ. ಗೌಡ | ೭೦ |
| ೧೬. | ಶಿಕಾರಿಪುರ ತಾಲ್ಲೂಕಿನ ಅಪ್ರಕಟಿತ ಶಾಸನಗಳು | ರಮೇಶ ಬಿ. ಹಿರೇಜಂಬೂರು | ೭೫ |
| ೧೭. | ಸಾದೇಹಳ್ಳಿಯ ಅಪ್ರಕಟಿತ ಶಾಸನ | ಎಂ. ಕಾವ್ಯಶ್ರೀ | ೭೯ |
| ೧೮. | ಹಾರೋಗುಳಿಗೆಯ ಇಮ್ಮಡಿ ಬುಕ್ಕನ ಅಪ್ರಕಟಿತ ಶಾಸನ | ಮೇಕನಗದ್ದೆ ಲಕ್ಷ್ಮಣಗೌಡ | ೮೧ |
| ೧೯. | ಕಳಸದ ಬಸದಿಯಲ್ಲಿನ ಅಪ್ರಕಟಿತ ಶಾಸನಗಳು | ಕೆ.ಎನ್. ಸುಪ್ರೀತ | ೮೫ |
| ೨೦. | ಕಳಸದ ಚಂದ್ರನಾಥ ಬಸದಿಯ ಅಪ್ರಕಟಿತ ಶಾಸನಗಳು | ಹೆಚ್.ಆರ್. ಪಾಂಡುರಂಗ | ೮೮ |
| ೨೧. | ಅಜ್ಜವಾರದ ಮನ್ನಾರ್‌ಪುರ ಅಪ್ರಕಟಿತ ಶಾಸನ | ಎಸ್.ವೈ. ನಿರ್ಮಲಾ | ೯೫ |
| ೨೨. | ಕಲ್ಲೂರು ಹಾಗೂ ಮುದುವತ್ತಿಯ ಅಪ್ರಕಟಿತ ಶಾಸನ ಹಾಗೂ ವೀರಗಲ್ಲು ಸ್ಮಾರಕಗಳು | ಕೆ.ಆರ್. ನರಸಿಂಹನ್ | ೯೬ |
| ೨೩. | ಅಮಟೆಕೊಪ್ಪ ಗ್ರಾಮದ ಎರಡು ಹೊಸ ಶಾಸನಗಳು | ಮಧುಗಣಪತಿರಾವ್ ಮಡೆನೂರು | ೧೦೩ |
| ೨೪. | ಕಲಸಿಂದ ಗ್ರಾಮದ ಅಪ್ರಕಟಿತ ಶಾಸನ | ಎಂ. ಯೋಗೇಶ್ವರಿ | ೧೦೬ |
| ೨೫. | ಬಾಡಗಂಡಿಯ ಬಾವಿಯ ಅಪ್ರಕಟಿತ ಶಾಸನ | ಸುಮಂಗಲಾ ಮೇಟಿ | ೧೦೮ |

| | | | |
|---|---|---|---|
| ೨೬. | ಹಿರೇಮಲ್ಲನಕೆರೆಯ ಅಪ್ರಕಟಿತ ಶಾಸನ | ಎ. ನಾಗವೇಣಿ | ೧೧೧ |
| ೨೭. | ಗೇರುಸೊಪ್ಪೆಯ ಅಪ್ರಕಟಿತ ಶಾಸನ ಜೈನ ವೀರಗಲ್ಲು | ಹೆಚ್.ಪಿ. ನಿತಿನ್ | ೧೧೩ |
| ೨೮. | ನಿಜಗನಹಳ್ಳಿಯ ಅಪ್ರಕಟಿತ ಶಾಸನ | ಎಂ. ಸುನೀಲ್‌ಕುಮಾರ್ | ೧೧೬ |
| ೨೯. | ಹಳ್ಳೂರಿನ ಅಪ್ರಕಟಿತ ಗೋಸಾಸ ಶಾಸನ | ಎಚ್.ಜಿ. ಕೃಷ್ಣಪ್ಪ | ೧೧೭ |
| ೩೦. | ಜಯರೇಖೆ ಶಾಸನಗಳಲ್ಲಿ ದೇಶಾಚಾರ ಮತ್ತು ಕುಲಾಚಾರ ನ್ಯಾಯಪದ್ಧತಿ | ಸ್ಮಿತಾರೆಡ್ಡಿ | ೧೨೧ |
| ೩೧. | ಮಾಗಡಿ ಕೋನಪ್ಪನಾಯಕನ ಶಾಸನದ ಪುನರ್ ವಿಮರ್ಶೆ | ನಾಗೇಂದ್ರ | ೧೩೦ |
| ೩೨. | ಮಾಕನೂರಿನ ಬೊಪ್ಪಣ ಶಾಸನದ ಹೊಸಹೊಳವು | ಬಿ.ಟಿ. ಚಾರುಲತಾ | ೧೩೩ |
| ೩೩. | ಹೊಯ್ಸಳ ೧ನೆಯ ನರಸಿಂಹನು ಕೊಂದ ತೈಲಪನು ಯಾರು? | ಬಿ. ರಾಜಶೇಖರಪ್ಪ | ೧೩೬ |
| ೩೪. | ಕಲ್ಯಾಣ ಚಾಲುಕ್ಯ ಇಮ್ಮಡಿ ಮತ್ತು ಮುಮ್ಮಡಿ ಜಗದೇಕಮಲ್ಲರು ಅಭಿನ್ನರು – ಕಾಲದ ವಿದ್ಯಮಾನಗಳು | ಹೆಚ್.ವಿ. ಇಂದುಶೇಖರ್ ಚಿನಿವಾರ್ | ೧೪೧ |
| ೩೫. | ಮನಗುಂಡಿಯ ಶಾಸನೋಕ್ತ ಶೈವ ಸ್ಥಾನಾಚಾರ್ಯರು | ಮಂಗಲಾ ಎಂ. ಗೌಡ | ೧೫೧ |
| ೩೬. | ಹುನಗುಂದ ತಾಲ್ಲೂಕಿನ ಶಾಸನೋಕ್ತ ಮಹಿಳೆಯರು | ಓಜರಾಜ ನದಾಫ್ | ೧೫೩ |
| ೩೭. | ಮೈಲಾರನ ಪ್ರಾಚೀನತೆ : ಶಾಸನಗಳನ್ನು ಅನುಲಕ್ಷಿಸಿ | ಪಿ. ನವೀನ್‌ಕುಮಾರ್ | ೧೫೬ |
| ೩೮. | ಕಾಲಕಾಲೇಶ್ವರ ಕ್ಷೇತ್ರದ ಶಾಸನೋಕ್ತ ದತ್ತಿ ಮತ್ತು ಭೂದಾನ | ಮಲ್ಲಿಕಾರ್ಜುನ ಕುಂಬಾರ | ೧೬೦ |
| ೩೯. | ಮಂಡ್ಯ ಪ್ರದೇಶದ ಶಾಸನೋಕ್ತ ಗಾವುಂಡರು | ಎಸ್. ಶಿವರಾಮು | ೧೬೪ |
| ೪೦. | ಶಾಸನಗಳ ಹಿನ್ನೆಲೆಯಲ್ಲಿ ಮಾಗಡಿಯ ಸಾಂಸ್ಕೃತಿಕ ಚರಿತ್ರೆ | ಎಂ.ಕೆ. ಮಂಜುನಾಥ/ಕೆ.ವಿ.ಮುರಳಿ | ೧೭೦ |
| ೪೧. | ಕೊಂಡರಾಜ ಮಹಾ ಅರಸು | ಸಿ.ಎಂ. ತಿಪ್ಪೇಸ್ವಾಮಿ | ೧೭೮ |
| ೪೨. | ನಂಜನಗೂಡು ತಾಲ್ಲೂಕಿನ ಹೊಸವೀಡು ಹೊಯ್ಸಳರ ರಾಜಧಾನಿಯಾಗಿತ್ತೆ? | ಎಸ್.ಪಿ. ಮಂಜುಶ್ರೀ | ೧೮೨ |
| ೪೩. | ಜೋಗಲಕಾಪ್ಪಿ ಶಾಸನ ಹೊಸ ವಿಚಾರಗಳು | ವಸುಧಾ ವಿದ್ಯಾಧೀಶ | ೧೮೫ |
| ೪೪. | ಹೊಯ್ಸಳ ಮಹಾಪ್ರಧಾನಿ ದೇವರಾಜ ಮತ್ತು ಅವನ ವಂಶೀಯರು | ಎಸ್. ಗಂಗಾಂಬಿಕೆ ಗೋವರ್ಧನ | ೧೮೮ |
| ೪೫. | ಮಂಡ್ಯ ಜಿಲ್ಲೆಯ ಶಾಸನೋಕ್ತ ಜೈನ ಬಸದಿಗಳು | ಲಿಂಗರಾಜು | ೧೯೩ |
| ೪೬. | ಕರ್ನಾಟಕದ ಸಾಮಂತ ಅರಸು ಮನೆತನಗಳ ಕಾಲದ ಜೈನಧರ್ಮ | ಮಹೇಶಕುಮಾರ ಹ. ಪಾಟೀಲ | ೨೦೦ |
| ೪೭. | ಬಾಗಲಕೋಟೆ ಜಿಲ್ಲೆಯ ಶಾಸನಗಳಲ್ಲಿ ಶ್ರಮಿಕ ವರ್ಗ | ಸುನೀಲ ಕುಸ್ತಿ | ೨೦೫ |
| ೪೮. | ಬಾಗಲಕೋಟೆಯ ಶಾಸನೋಕ್ತ ಧಾರ್ಮಿಕ ಕೇಂದ್ರಗಳು | ವೀಣಾ ಕಲ್ಮಠ | ೨೧೧ |
| ೪೯. | ರಾಯಚೂರು ಜಿಲ್ಲೆಯ ನೀರಾವರಿ ಚೌಕಟ್ಟು ಒಂದು ಚಾರಿತ್ರಿಕ ಪರಿಶೀಲನೆ | ಟಿ.ವಿ. ನಾಗರಾಜ | ೨೧೪ |
| ೫೦. | ವಿಜಯನಗರ ಪಟ್ಟಣದ ನೈರ್ಮಲ್ಯ ವ್ಯವಸ್ಥೆ | ಪಿ. ಮಲ್ಲೇಶಪ್ಪ | ೨೧೯ |
| ೫೧. | ಕಡೂರು, ತರೀಕೆರೆ ತಾಲ್ಲೂಕಿನ ಶಾಸನಗಳಲ್ಲಿ ವ್ಯಕ್ತಿನಾಮಗಳ ಕೆರೆಗಳು | ಡಿ.ಎಂ. ನಾಗರಾಜು | ೨೨೪ |
| ೫೨. | ಕೃಷ್ಣದೇವರಾಯನ ಕಾಲದ ಶಾಸನೋಕ್ತ ಚನ್ನಪಟ್ಟಣ ಸೀಮೆ | ಎಸ್.ಜಿ. ಬೋರೇಗೌಡ | ೨೨೯ |
| ೫೩. | ಅಣ್ಣಿಗೇರಿ ತಲೆಬುರುಡೆಗಳು ಹತ್ಯಾಕಾಂಡದ ಅವಶೇಷಗಳೇ? | ಜೆ.ಎಂ. ನಾಗಯ್ಯ | ೨೩೨ |
| ೫೪. | ಎರುಮರ್ಯನಾಡು | ಆದಪ್ಪ ಪಾಸೋಡಿ | ೨೩೬ |
| ೫೫. | ಅಂಬಕ್ಕಿನಾಡು-ಕೈವಾರ ನಾಡಿನ ಒಂದು ಅಂತರ್ವಿಭಾಗ | ಪಿ.ವಿ. ಕೃಷ್ಣಮೂರ್ತಿ | ೨೪೬ |

| | | | |
|---|---|---|---|
| ೫೬. | ಹಾಡವಳ್ಳಿಯ ಚೆನ್ನಾದೇವಿ | ವಿ. ಸಂಧ್ಯಾ | ೨೫೧ |
| ೫೭. | ಕನ್ನಡಿಗ ವಂಶದ ಮಾಧವ ದಂಡನಾಯಕ | ಅನಿತಾ ಗುಡಿ | ೨೫೭ |
| ೫೮. | ಮಯಗೆರೆ ನಾಡಿನ ರಣವೀರ ಸಿಯಾಗೆಲ್ಲ-ಪುನರಾವಲೋಕನ | ಡಿ.ಎನ್. ಯೋಗೀಶ್ವರಪ್ಪ | ೨೫೮ |
| ೫೯. | ವಿಜಯನಗರ ಸಾಮ್ರಾಜ್ಯ ಸ್ಥಾಪನೆ | ಗುರುಶಾಂತಪ್ಪ | ೨೬೦ |
| ೬೦. | ಶೃಂಗೇರಿ ಪರಿಸರದ 'ಸ್ಥಾನಿಕ' ಪರಂಪರೆ | ಕೆ.ಪಿ. ಪ್ರಕಾಶ | ೨೬೭ |
| ೬೧. | ಶ್ರೋತ್ರೀಯ ಗುತ್ತಿಗೆ: ಕೆಲವು ಹೊಸ ಸಂಗತಿಗಳು | ಸುಂಕಂ ಗೋವರ್ಧನ | ೨೬೯ |
| ೬೨. | ಶಾಸನವಲ್ಲಿ ಗೋಷ್ಠಿ ಪದದ ಅರ್ಥ ವಿವೇಚನೆ | ನಳಿನಿ ವೆಂಕಟೇಶ್ | ೨೮೭ |
| ೬೩. | ಅಲಗಿಲವಾಡ ಒಂದು ಐತಿಹಾಸಿಕ ಪರಿಶೀಲನೆ | ಜೆ.ಕೆ. ಮಲ್ಲಿಕಾರ್ಜುನಪ್ಪ | ೨೯೧ |
| ೬೪. | ರಾಮಗಿರಿ ಕೈಫಿಯತು: ಒಂದು ಅಪ್ರಕಟಿತ ದಾಖಲೆ | ಲಕ್ಷ್ಮಣ್ ತೆಲಗಾವಿ | ೨೯೪ |
| ೬೫. | ಇಕ್ಕೇರಿ ದೇವಾಲಯದ ಅರ್ಚಕರಲ್ಲಿರುವ ನಿರೂಪಗಳು | ಕೆಳದಿ ವೆಂಕಟೇಶ್ ಜೋಯಿಸ್ | ೨೯೮ |
| ೬೬. | ಅಣ್ಣಿಗೇರಿಯ ಅಪ್ರಕಟಿತ ದಾಖಲು ಪತ್ರಗಳು | ಸಂಜಯ ಎನ್. ಹಂಜೆ | ೩೦೯ |
| ೬೭. | ಮುಷ್ಟಿಘಾವಿ ಬೀರಪ್ಪದೇವರಿಗೆ ಸಂಬಂಧಿಸಿದ ದಾಖಲೆ | ಎಫ್.ಟಿ. ಹಳ್ಳಿಕೇರಿ | ೩೧೩ |
| ೬೮. | ತಳಸಮುದಾಯದ ಅಪ್ರಕಟಿತ ಜಯಪತ್ರ | ರವಿಕುಮಾರ ಕೆ.<br>ಹಿ.ಗೂ. ದುಂಡಪ್ಪ | ೩೧೯ |
| ೬೯. | ಮುಮ್ಮಡಿ ಕೃಷ್ಣರಾಜ ಒಡೆಯರ್ ಶಿವಗಂಗೆಯ ಮೇಲಣಗವಿ ಮಠಕ್ಕೆ ಕೊಟ್ಟ ನಿರೂಪ | ಬಿ. ನಂಜುಂಡಸ್ವಾಮಿ | ೩೨೯ |
| ೭೦. | ಕಡತಗಳಲ್ಲಿ ವಿಧವಾ ಪ್ರಕರಣದ ದಾಖಲೆಗಳ ಅವಲೋಕನ | ಎನ್.ಆರ್. ಲಲಿತಾಂಬ | ೩೩೪ |
| ೭೧. | ಹಂಡೆ ಪಾಳೆಗಾರ ಹನುಮಪ್ಪನಾಯಕನ ದಾನಪತ್ರಗಳು ಮತ್ತು ಶಾಸನಗಳು | ಎಸ್.ಸಿ. ಪಾಟೀಲ್ | ೩೪೩ |
| ೭೨. | ಹೊಂಬುಜ ಮಠದ ಹಸ್ತಪ್ರತಿಗಳು: ಪರಿಚಯ | ಕೆ. ರವೀಂದ್ರನಾಥ | ೩೪೭ |
| ೭೩. | ಜೆಪ್ಪಿನಕೆರೆಯಲ್ಲಿ ದೊರೆತ ಮಹಾರಥಿ ಮತ್ತು ಆನಂದ ಅರಸರ ಸೀಸದ ನಾಣ್ಯಗಳು | ಎಸ್.ವೈ. ಸೋಮಶೇಖರ್ | ೩೪೯ |
| ೭೪. | ಕೆರೆಗುಡಿಹಳ್ಳಿ ನೊಳಂಬೇಶ್ವರ ದೇವಾಲಯದ ಐತಿಹಾಸಿಕ ವಿಶ್ಲೇಷಣೆ | ಬಿ.ಸಿ. ರಾಕೇಶ್ | ೩೫೨ |
| ೭೫. | ಮಲ್ಲಂಪಲ್ಲಿ ಜನಾರ್ದನ ದೇವಾಲಯ | ಜೆ.ಎಸ್. ರಾಮಚಂದ್ರ | ೩೫೬ |
| ೭೬. | ಶ್ರೀ ಸದಾಶಿವರುದ್ರ ದೇವಸ್ಥಾನ ಸುರ್ಯ | ಸನ್ಮತಿಕುಮಾರ್ | ೩೫೯ |
| ೭೭. | ಮಾಳೇನಹಳ್ಳಿಯ ಚಿದಂಬರ ದೇವಸ್ಥಾನ ಪಂಥ | ಎ.ಸಿ. ಕುಮಾರ್ | ೩೬೨ |
| ೭೮. | ಉಜ್ಜಯನಿ ಶ್ರೀ ಸಿದ್ದೇಶ್ವರ ಜಗದ್ಗುರುಗಳು ಮತ್ತು ಯಲಿವಾಳದ ಸಾಂಸ್ಕೃತಿಕ ಅನ್ವಯತೆ | ಶಕುಂತಲಾ ಸಿಂಧೂರ | ೩೬೫ |
| ೭೯. | ನಾಗಮಂಗಲದ ಪ್ರಾಚೀನ ದೇವಾಲಯ ಜೀರ್ಣೋದ್ಧಾರ | ಮಹಮ್ಮದ್ ಕಲೀಂಉಲ್ಲ | ೩೬೮ |
| ೮೦. | ತುಂಗಭದ್ರಾ ನದಿಯ ಪ್ರಾಚೀನತೆ: ಚಾರಿತ್ರಿಕ ನೋಟ | ಟಿ. ಓಂಕಾರಪ್ಪ | ೩೭೧ |
| ೮೧. | ಸೂರ್ಯಗ್ರಹಣ ಸಮಯದ ಆತ್ಮ ಬಲಿದಾನದ ಶಾಸನ ಶಿಲ್ಪಗಳು | ಆರ್. ಶೇಜೇಶ್ವರ | ೩೭೪ |
| ೮೨. | ಹೊಂಬುಜ ಕಮಠೇಶ್ವರ ದೇವಾಲಯದ ಕಥಾನಿರೂಪಕ ಶಿಲ್ಪಗಳು | ದತ್ತಪ್ರಸನ್ನ ಎಲ್. ಪಾಟೀಲ | ೩೭೭ |
| ೮೩. | ಪೇಶಪ್ಪೈ ನಾರಾಯಣ ದೇವಾಲಯದ ಕಥಾನಿರೂಪಕ ಶಿಲ್ಪಗಳು | ರಂಗನಾಥರಾವ್ ಹೆಚ್. ಕರಾಡ್ | ೩೮೪ |

## ೭೪

# ಕೆರೆಗುಡಿಹಳ್ಳಿ ನೊಳಂಬೇಶ್ವರ ದೇವಾಲಯದ ಐತಿಹಾಸಿಕ ವಿಶ್ಲೇಷಣೆ

ಜಿ.ಸಿ. ರಾಕೇಶ್*

ಹರಪನಹಳ್ಳಿ ತಾಲ್ಲೂಕು ಅರಸಿಕೆರೆ ಹೋಬಳಿ ಹೋಸಕೋಟೆ ಗ್ರಾಮ ಪಂಚಾಯಿತಿಗೆ ಸೇರಿದ ಕೆರೆಗುಡಿಹಳ್ಳಿಯ ನೊಳಂಬೇಶ್ವರ ದೇವಾಲಯದ ಐತಿಹಾಸಿಕ ಹಿನ್ನಲೆಯನ್ನು ಕುರಿತು ವಿವರಿಸುವುದಾಗಿದೆ. ಅಲ್ಲದೆ ಹರಪನಹಳ್ಳಿ ಪರಿಸರದಲ್ಲಿ ದೊರೆಯುವ ಶಾಸನಗಳು ಹಾಗೂ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪದ ಆಧಾರದ ಮೇಲೆ ದೇವಾಲಯವನ್ನು ಕಲ್ಯಾಣಿ ಚಾಲುಕ್ಯರ ಅಧೀನ ಅರಸರಾದ ನೊಳಂಬರು ನಿರ್ಮಿಸಿರುವುದಾಗಿ ಚರ್ಚಿಸಲಾಗಿದೆ. ಗ್ರಾಮವು ಹರಪನಹಳ್ಳಿಯಿಂದ ೧೭ ಕಿ. ಮೀ. ದೂರದಲ್ಲಿದೆ, ಕೆರೆಗುಡಿಹಳ್ಳಿ ಮೂಲವಾಗಿ ದೇವಾಲಯದ ಪಕ್ಕದಲ್ಲಿದ್ದು ನಂತರದಲ್ಲಿ ಅಲ್ಲಿಂದ ಸ್ಥಳಾಂತರವಾಗಿ ಈಗಿರುವ ಜಾಗದಲ್ಲಿ ಊರನ್ನು ನಿರ್ಮಿಸಿಕೊಂಡಿದ್ದಾರೆ. ದೇವಾಲಯದಿಂದ ೧ ಕಿ.ಮೀ ಅಂತರದಲ್ಲಿದೆ. ಹೊಸ ಊರಿನಲ್ಲಿ ೧೦೦ ಮನೆಗಳಿವೆ ಸುಮಾರು ೧೦೦೦ ಜನಸಂಖ್ಯೆಯಿರುವ ಗ್ರಾಮದಲ್ಲಿ ಲಿಂಗಾಯತರು, (ಎರಡು ಮನೇತನದವರು ಸಕ್ರೋಳರ ಮತ್ತು ಗಂಗವ್ವರ ಮಾತ್ರ ಇದ್ದಾರೆ) ಅಯ್ಯನವರು, ಕುರುಬರು, ಆಚಾರಿಗಳು ಮತ್ತು ಬೋವಿ ಜನಾಂಗದವರಿದ್ದಾರೆ. ಕೆರೆಗುಡಿಹಳ್ಳಿಯಿಂದ ಅರಸಿಕೆರೆಗೆ ಹೋಗುವ ಮಾರ್ಗದಲ್ಲಿ ಬೃಹತ್ ಆಕಾರದ ಕೆರೆ ಕಂಡುಬರುತ್ತದೆ. ಆ ಕೆರೆಯ ಬಲಭಾಗದಲ್ಲಿ ನೊಳಂಬ ಕಲ್ಯಾಣ ಚಾಲುಕ್ಯರ ಕಲಾ ಶೈಲಿಯನ್ನು ಹೊಂದಿರುವ ದೇವಾಲಯಗಳು ಕಂಡುಬರುತ್ತವೆ. ಅವುಗಳು ಈಶ್ವರ ದೇವಾಲಯ (ಸಿದ್ದೇಶ್ವರ ದೇವಾಲಯ), ನೊಳಂಬೇಶ್ವರ ಮತ್ತು ಶಾರದ ದೇವಾಲಯಗಳ ಸಮುಚ್ಚಯ ಒಂದೇ ಪ್ರಕಾರದ ಗೋಡೆಯ ಒಳಭಾಗದಲ್ಲಿ ನಿರ್ಮಾಣಗೊಂಡಿದ್ದು ಕಂಡುಬರುತ್ತದೆ. ಈ ಪ್ರಕಾರದ ಗೋಡೆಯನ್ನು ಹರಪನಹಳ್ಳಿ ಪಾಳೇಯಗಾರರು ಕಟ್ಟಿಸಿದ್ದಾರೆ. ಈ ಲೇಖನದ ಪ್ರಮುಖ ಉದ್ದೇಶವೇ ನೊಳಂಬೇಶ್ವರ ದೇವಾಲಯವು ನೊಳಂಬರಸರ ಕಾಲದಲ್ಲಿ ಪ್ರಾದೇಶಿಕ ಶೈಲಿಯಲ್ಲಿ ಮೈಗೂಡಿಸಿಗೊಂಡು ನಿರ್ಮಿತವಾಗಿದೆ ಎಂಬುದನ್ನು ಸಮರ್ಥಿಸುವುದು.

ಚಾಲುಕ್ಯರ ಸಾಮಂತರಾದ ನೊಂಳಬ ಅರಸರು ಈ ಸಂಸ್ಕೃತಿಯನ್ನು ಮುಂದುವರಿಸಿದ್ದಾರೆ. ಹಾಗಾಗಿ ದೇವಾಲಯಗಳಿಗೆ ನೊಂಳಬೇಶ್ವರ ಎಂಬ ಹೆಸರು ಬಂದಿರುವುದನ್ನು ಕಾಣಬಹುದು. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ನೊಳಂಬರು ತಮ್ಮನ್ನು ಈಶ್ವರ ವಂಶದವರೆಂದು ಹೇಳಿಕೊಂಡಿರುವರು, ಅದರಂತೆ ಈಶ್ವರ ಲಿಂಗ (ನೊಳಂಬೇಶ್ವರ) ಅದರ ಮುಂದೆ ನಂದಿಯನ್ನು ಪ್ರತ್ಯೇಕವಾಗಿ ಮಂಟಪದಲ್ಲಿ ಸ್ಥಾಪಿಸುವ ಪರಿಪಾಠ ಇವರ ವಂಶದಲ್ಲಿ ಬೆಳೆದುಬಂದಿರುವುದನ್ನು ಕಾಣಬಹುದು. ಇದಕ್ಕೆ ಅನುಗುಣವಾಗಿ ಕೆರೆಗುಡಿಹಳ್ಳಿಯ ನೊಳಬೇಶ್ವರ ದೇವಾಲಯದ ಮುಂದೆ ಬೃಹದಕಾರದ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಷ್ಟೆ ಅಲ್ಲದೆ ನೊಳಂಬ ಅರಸರು ದೇವಾಲಯಗಳನ್ನು ಕಟ್ಟಿಸಿ ಅವಳಿಗೆ ದಾನ ದತ್ತಿಯನ್ನು ನೀಡಿರುವುದನ್ನು ಶಾಸನಗಳು ಸಮರ್ಥಿಸುತ್ತವೆ.

ಹಗರಿಬೊಮ್ಮನಹಳ್ಳಿಯ ಕ್ರಿ.ಶ. ೧೦೪೫ರ ಶಾಸನದಲ್ಲಿ ನೊಳಂಬರ ದಂಡನಾಯಕ ತಿಕ್ಕಣ್ಣನು ನೊಳಂಬೇಶ್ವರ ದೇವಾಲಯ ಸ್ಥಾಪನೆ ಮಾಡಿದ ಉಲ್ಲೇಖ ಬರುತ್ತದೆ. ಅರಸಿಕೆರೆಯ ಶಾಸನಗಳಲ್ಲಿ ನೊಳಂಬಗೌಡ, ಪಲ್ಲವಾದಿತ್ಯ ಹಾಗು ನೊಳಂಬಅರಸಿಕೆರೆ ಉಲ್ಲೇಖಗಳಿದ್ದು ಕೆರೆಗುಡಿಹಳ್ಳಿಯು ಅರಸೀಕೆರೆ ಹೋಬಳಿಯಲ್ಲೇ ಕಂಡುಬರುತ್ತದೆ. ಆದ್ದರಿಂದ ನೊಳಂಬೇಶ್ವರ ದೇವಾಲಯವನ್ನು ನೊಳಂಬಅರಸರೇ ನಿರ್ಮಿಸಿದ್ದಾರೆಂದು ಖಚಿತವಾಗಿ ಹೇಳಬಹುದು.


**ದೇವಾಲಯದ ಲಕ್ಷಣಗಳು:** ನೊಳಂಬೇಶ್ವರ ದೇವಾಲಯವು ಏಕಕೂಟ ದೇವಾಲಯವಾಗಿದ್ದು, ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ (ಕಂಬಗಳ ಪಡಸಾಲೆ), ನಂದಿ ಮಂಟಪ ಭಾಗಳನ್ನು ಒಳಗೊಂಡಿದೆ. ಗರ್ಭಗೃಹವು ಚೌಕಾಕೃತಿಯನ್ನು ಹೊಂದಿದ್ದು, ಇದು ಪ್ರಧಾನ ದೇವರಾದ ಈಶ್ವರಲಿಂಗವನ್ನು (ನೊಳಂಬೇಶ್ವರ) ಪ್ರತಿಷ್ಠಾಪಿಸುವ ಭಾಗವಾಗಿದೆ. ಗರ್ಭಗೃಹದಲ್ಲಿ ೪ ಅಡಿ ಎತ್ತರದ ಈಶ್ವರ ಲಿಂಗವಿದೆ. ಲಿಂಗವು ಪೀಠ, ಪಾಣಿ ಬಟ್ಟಲು, ಸಾಲಿಗ್ರಾಮ ಭಾಗಗಳನ್ನು ಒಳಗೊಂಡಿದೆ. ಪಾಣಿ ಬಟ್ಟಲುನಲ್ಲಿ ಅಭಿಷೇಕದ ನೀರು ಸರಾಗವಾಗಿ ಹರಿದು ಹೋಗಲು ಪ್ರನಾಳ ಹೊಂದಿದೆ.

* ಸಹಾಯಕ ಪ್ರಾಧ್ಯಾಪಕರು, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ, ಮೊ: ೯೯೮೩೩೧೩೮೩

ಗರ್ಭಗೃಹವು ೧೨x೧೨ ಅಳತೆಯ ಚೌಕಕಾರದಲ್ಲಿದ್ದು ಸರಳವಾದ ಭಿತ್ತಿಯನ್ನು ಹೊಂದಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ಅಷ್ಟಕೋನಾಕಾರದ ಕದಳೀಕರಣದ ಕೆತ್ತನೆಯನ್ನು ಮಾಡಲಾಗಿದೆ. ಆ ಕದಳೀಕರಣದಲ್ಲಿ ಅರಳಿದ ಪದ್ಮ ಕೆತ್ತನೆಯನ್ನು ಕಾಣಬಹುದು. ಗರ್ಭಗೃಹದ ಬಾಗಿಲುವಾಡವು ಐದು ಶಾಖೆಯನ್ನು ಹೊಂದಿದೆ. ಆ ಶಾಖೆಗಳಲ್ಲಿ ವಜ್ರಕಾರದ ರಚನೆ, ಲತಾಬಳ್ಳಿ ರಚನೆ, ಗಣ ಶಿಲ್ಪ ಕೆತ್ತನೆಯನ್ನು ಕಾಣಬಹುದು. ಬಾಗಿಲುವಾಡದ ಎಡ ಮತ್ತು ಬಲ ಪಾರ್ಶ್ವದಲ್ಲಿ ಶೈವ ದ್ವಾರಪಾಲಕರ ಕೆತ್ತನೆ ಮಾಡಲಾಗಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ಗರ್ಭಗೃಹ ಹಾಗೂ ನವರಂಗದ ಮಧ್ಯಭಾಗದಲ್ಲಿ ಸುಕನಾಸಿಯು ಕಂಡುಬರುತ್ತದೆ. ಸುಕನಾಸಿಯ ಭಾಗವನ್ನು ಪುನ:ಜೀರ್ಣೋದ್ಧಾರ ಮಾಡಲಾಗಿದ್ದು ಮುಂಭಾಗದ ಅಡ್ಡ ಗೋಡೆಯನ್ನು ತೆಗೆಯಲಾಗಿದೆ. ಹಾಗಾಗಿ ಈ ಭಾಗವು ನವರಂಗಕ್ಕೆ ಹೊಂದಿಕೊಂಡಿದೆ. ಇಲ್ಲಿ ಮಕರ ತೋರಣಗಳು ಮತ್ತು ಎರಡು ಕಂಬಗಳು ಕಂಡುಬರುತ್ತದೆ. ಆ ಕಂಬಗಳು ಪೀಠ, ಕಾಂಡ, ಕುಂಭ ಭಾಗದ ಮೇಲೆ ಮಕರ ತೋರಣವನ್ನು ಹೊಂದಿವೆ. ಮಕರತೋರಣದ ಮಧ್ಯಭಾಗದಲ್ಲಿ ಉಮಮಾಹೇಶ್ವರದ ಶಿಲ್ಪವಿದ್ದು, ಅವರ ಎಡ ಮತ್ತು ಬಲ ಪಾರ್ಶ್ವದಲ್ಲಿ ಚಾಮರವನ್ನು ಹಿಡಿದಿರುವ ಶಿಲ್ಪಗಳು ಕಂಡುಬರುತ್ತವೆ. ಮಕರತೋರಣದ ಕೊನೆಯ ಭಾಗದಲ್ಲಿ ಶೈವ ದ್ವಾರಪಾಲಕರನ್ನು ಕೆತ್ತಲಾಗಿದೆ. ಕಂಬಗಳು ಸುಖನಾಸಿಯ ಬಗಿಲುವಾಡದಂತೆ ಗೋಚರಿಸುತ್ತದೆ.

ಅಂತರಾಳಕ್ಕೆ ಹೊಂದಿಕೊಂಡಂತೆ ಸಭಾಮಂಟಪವಿದೆ (ಕಂಬಗಳ ಪಡಸಾಲೆ). ಸಭಾಮಂಟಪದ ಭುವನೇಶ್ವರಿಯನ್ನು ಹೊಳಪುಳ್ಳ ನಾಲ್ಕು ಸ್ವತಂತ್ರ ಶ್ರೀಕಾರ ಕಂಬಗಳು ಹೊತ್ತು ನಿಂತಿವೆ. ಈ ಕಂಬಗಳು ಸುಮಾರು ೧೦ ಅಡಿ ಎತ್ತರವಾಗಿವೆ. ಕಂಬಗಳನ್ನು ನಿರ್ಮಾಣಮಾಡಲು ಬಳಪದಕಲ್ಲು ಬಳಸಿ ಅದಕ್ಕೆ ಹೊಳಪನ್ನು ನೀಡಲಾಗಿದೆ. ಶ್ರೀಕಾರ ಕಂಬವು ಪೀಠ, ಪಾದ, ಕಾಂಡ, ಘಟ, ಫಲಕ ಮತ್ತು ಪೋತಿಕ ಭಾಗಗಳನ್ನು ಹೊಂದಿದೆ. ಪಾದ ಭಾಗದ ಪ್ರತಿಯೊಂದು ಕರ್ಣದಲ್ಲೂ ಚಿಕ್ಕಸ್ತಂಭಗಳ ರಚನೆಯಿದ್ದು, ಆ ಸ್ತಂಭಗಳ ಮಧ್ಯ ಭಾಗದಲ್ಲಿ ಮಕರ ತೋರಣ ಪ್ರಭಾವಳಿಯ ಮಧ್ಯದಲ್ಲಿ ಉಮಮಾಹೇಶ್ವರ ಶಿಲ್ಪ, ವಿಷ್ಣು, ಮೂರುಮುಖದ ಪರಮೇಶ್ವರ, ಭೈರವ, ಗಣೇಶ, ಪಾರ್ವತಿ, ಕಾರ್ತಿಕೇಯ, ಮುಂತಾದ ಶಿಲ್ಪಗಳ ಕೆತ್ತನೆ ಕಂಡುಬರುತ್ತದೆ.

ಕಂಬಗಳ ಪಟಸಾಲೆಯಲ್ಲಿ ಹೊಳಪುಳ್ಳ ಗಂಟಾಕಾರದ ಕಂಬಗಳ ನಂತರದಲ್ಲಿ ೧೨ ಚಿತ್ರಿತ ವಿಷ್ಣುಕಾಂತ ಕಂಬಗಳು ಕಂಡುಬರುತ್ತದೆ. ಪೀಠದ ಮೇಲೆ ಪಾದ ಭಾಗವು ಚೌಕಾಕಾರವಾಗಿದ್ದು, ಅದರ ಮೇಲ್ಭಾಗದಲ್ಲಿನ ಕಾಂಡ ಭಾಗವು ಪ್ರಾರಂಭದಲ್ಲಿ ೧೬ ಪಟ್ಟಿಕೆಗಳನ್ನು ಹೊಂದಿದ್ದು, ನಂತರದ ಮಧ್ಯಕಾಂಡದಲ್ಲಿ ೮ ಪಟ್ಟಿಕೆಗಳಿದ್ದು, ಆ ೮ ಪಟ್ಟಿಕೆಗಳ ಮೇಲೆ ವಿವಿಧ ರೀತಿಯ ಶಿಲ್ಪಗಳು, ಕೀರ್ತಿಮುಖದ ಕೆತ್ತನೆಯನ್ನು ಮಾಡಲಾಗಿದೆ. ಈ ಮಾದರಿಯ ಕಂಬದ ಕಾಂಡ ಭಾಗದಲ್ಲಿ ನಾಗರಾಜ, ಕೇಸರಿ, ಮಯೂರ, ನರ್ತಕಿಯರು, ವರುಣ, ಕುಬೇರ, ವೀರಭದ್ರ, ವಾನರ ಮುಂತಾದ ಉಬ್ಬುಶಿಲ್ಪಗಳ ಕೆತ್ತನೆ ಇದೆ. ಸಭಾಮಂಟಪದ ಕಕ್ಷಾಸನದ ಮೇಲ್ಭಾಗದಲ್ಲಿ ಭದ್ರಕಾಂತ ಕಂಬಗಳಿವೆ. ಈ ಕಂಬಗಳ ಪೀಠದ ಭಾಗದಿಂದಲೇ ಭದ್ರ ಮತ್ತು ಉಪಭದ್ರಗಳು ಫಲಕದವರೆಗೆ ಮುಂದುವರೆದಿರುತ್ತದೆ. ಅದರ ನಂತರ ಫಲಕ ಮತ್ತು ಆಧಾರ ಪೋತಿಕ ಭಾಗಗಳು ಕಂಡುಬರುತ್ತವೆ. ಕಲ್ಯಾಣ ಚಾಳುಕ್ಯರ ವಿಕ್ರಮಾದಿತ್ಯನ ನಂತರ ಕಲ್ಯಾಣ ಚಾಳುಕ್ಯರ ದೇವಾಲಯಗಳ ವಾಸ್ತುಶೈಲಿಯಲ್ಲಿ ಕೆಲವು ಮಹತ್ವದ ಬದಲಾವಣೆಗಳು ಉಂಟಾಗಿರುವುದನ್ನು ಅಧ್ಯಯನ ವ್ಯಾಪ್ತಿಯಲ್ಲಿ ಗುರುತಿಸಬಹುದಾಗಿದೆ. ಗೂಢಮಂಟಪಕ್ಕೆ ತಾಗಿಕೊಂಡಂತೆ ಕಕ್ಷಾಸನವನ್ನು ಹೊಂದಿದ ಸಭಾ ಮಂಟಪಗಳನ್ನು ನಿರ್ಮಾಣ ಮಾಡುವ ಕಲೆ ಬೆಳವಣಿಗೆ ಹೊಂದಿತು. ಈ ಪ್ರಕ್ರಿಯೆ ಚಾಳುಕ್ಯ ವಿಕ್ರಮಾದಿತ್ಯನ ನಂತರ ಅಧಿಕಾರಕ್ಕೆ ಬಂದ ಅರಸರು ಕಲ್ಯಾಣ ಚಾಳುಕ್ಯರ ಪ್ರಾರಂಭಿಕ ದೇವಾಲಯಗಳಿಗೆ ನಂತರದಲ್ಲಿ ಸಭಾಮಂಟಪವನ್ನು ನಿರ್ಮಿಸಿರುವುದನ್ನು ಶಾಸನಗಳು ತಿಳಿಸುತ್ತವೆ. ಹರಪನಹಳ್ಳಿ ತಾಲ್ಲೂಕಿನ ರಾಗಿಮಸಲವಾಡದ ಕ್ರಿ.ಶ. ೧೧೨೭ರ ಚಾಳುಕ್ಯ ಭೂಲೋಕಮಲ್ಲದೇವನ ಆಳ್ವಿಕೆಯಲ್ಲಿ ವುಜ್ಜಭಟ್ಟನು ಈಶ್ವರ ದೇವಾಲಯದ ಸಭಾಮಂಟಪವನ್ನು ನಿರ್ಮಿಸಿ ರತ್ನಭೂಷಣ ವಿನಾಯಕನನ್ನು ಪ್ರತಿಷ್ಠಾಪಿಸಿ ಬಾವಿಯನ್ನು ನಿರ್ಮಿಸಿದ್ದರ ಕುರಿತು ತಿಳಿಸುತ್ತದೆ. (ದೇವರಕೊಂಡ ರೆಡ್ಡಿ ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಹರಪನಹಳ್ಳಿ ಶಾಸನ ಸಂಖ್ಯೆ-೩೪.) ಇದೇ ಮಾದರಿಯಲ್ಲಿ ಕೆರೆಗುಡಿಹಳ್ಳಿಯ ನೊಳಂಬೇಶ್ವರ ದೇವಾಲಯಕ್ಕೆ ೧೧ನೇ ಶತಮಾನದಲ್ಲಿ ಸಭಾಮಂಟಪವನ್ನು ನಿರ್ಮಾಣ ಮಾಡಿರುವುದನ್ನು ಗುರುತಿಸಬಹುದು. ಕೆರೆಗುಡ್ಡಹಳ್ಳಿಯ ನೊಳಂಬೇಶ್ವರ ದೇವಾಲಯದ ಸಭಾಮಂಟಪವು ಉತ್ತರ, ದಕ್ಷಿಣ ಮತ್ತು ಪೂರ್ವ ಭಾಗಗಳಲ್ಲಿ ಪ್ರವೇಶಕ್ಕೆ ಅನುಕೂಲವಾಗುವಂತೆ ಸೋಪಾನವನ್ನು ನಿರ್ಮಾಣ ಮಾಡಿರುವುದನ್ನು ಕಾಣಬಹುದು. ಸೋಪಾನವು ಸಿಂಹ ಕಟಾಂಜನದಿಂದ ಕೂಡಿದೆ. ಸಭಾಮಂಟಪದ ಸುತ್ತಲೂ ಒಂದುವರೆ ಅಡಿ ಎತ್ತರದ ಕಕ್ಷಾಸನವನ್ನು ಮಾಡಲಾಗಿದ್ದು, ಸಭಾಮಂಟಪದ ಮುಂಭಾಗದಲ್ಲಿ ನಂದಿಮಂಟಪವನ್ನು ನಿರ್ಮಿಸಲಾಗಿದೆ. ನೊಳಂಬರ ದೇವಾಲಯಗಳಲ್ಲಿ ನಂದಿಗಾಗಿ ದೇವಾಲಯದ ಮುಂದೆ ತೆರೆದ ಮಂಟಪವನ್ನು ಕಟ್ಟಿರುತ್ತಾರೆ. ಈ ಮಂಟಪದ ಮೇಲ್ಛಾವಣಿಯನ್ನು ೪ ಸ್ವತಂತ್ರ ಕಂಬಗಳು







ಹೊತ್ತು ನಿಂತಿವೆ. ನಂದಿ ಮಂಟಪದಲ್ಲಿ ೮ ಅಡಿ ಎತ್ತರ ೮ ಅಡಿ ಉದ್ದದ ನಂದಿ ಶಿಲ್ಪವಿದೆ. ಈ ಶಿಲ್ಪದ ನಿರ್ಮಾಣಕ್ಕೆ ಬಳಪದ ಕಲ್ಲನ್ನು ಬಳಸಲಾಗಿದೆ. ನಂದಿಯು ಎಡಗಾಲನ್ನು ಮುಂಚಾಚಿದೆ ಬಲಗಾಲನ್ನು ಒಮ್ಮುಡಚಿ ಕೊಂಡಿದೆ. ನಂದಿಯ ಮೈಕಟ್ಟನ್ನು ದಷ್ಟಪುಷ್ಟಕಾರವಾಗಿ ಕೆತ್ತಲಾಗಿದೆ. ಉಳಿದಂತೆ ನಂದಿಯ ಮೇಲೆ ವಿವಿಧ ಆಭರಣಗಳ ಕೆತ್ತನೆಯನ್ನು ಮಾಡಲಾಗಿದೆ. ಕ್ರಮವಾಗಿ ಹಣೆಪಟ್ಟಿ, ಗೆಜ್ಜೆಹಾರ, ಗಂಟೆ, ಜೂಲ, ಮೂಗುದಾರ, ಕಾಲ್ಗಡಗ, ಮುಂತಾದವು ಕಂಡುಬರುತ್ತವೆ.

ಕೆರೆಗುಡಿಹಳ್ಳಿಯ ಮೂರು ದೇವಾಲಯಗಳಿಗೆ ಹಾದುಹೋಗಲು ಬೃಹತ ಆಕಾರದ ಕಂಬಗಳ ಪಡಸಾಲೆಯನ್ನು ನಿರ್ಮಾಣ ಮಾಡಲಾಗಿದೆ. ಈ ಕಂಬಗಳ ಪಟಸಾಲೆಯಲ್ಲಿ ೧೪ ಕಂಬಗಳಿವೆ. ಕಂಬಗಳು ಅತ್ಯಂತ ಸರಳವಾಗಿದ್ದು, ಪೀಠ, ಕಾಂಡ, ಫಲಕ, ಬೋಧಿಗೆಯನ್ನು ಹೊಂದಿರುವುದು ಕಂಡುಬರುತ್ತದೆ. ಈ ಕಂಬಗಳ ಪಡಸಾಲೆಯಲ್ಲಿ ಸಭೆ, ಸಮಾರಂಭಗಳು ಹಾಗೂ ಚರ್ಚೆಗಳು ನಡೆಯುತಿತ್ತು ಎಂದು ಗ್ರಾಮಸ್ಥರು ತಿಳಿಸುತ್ತಾರೆ.

**ದೇವಾಲಯದ ಊರ್ಧ್ವಮುಖಿ ರಚನೆ:** ದೇವಾಲಯದ ಊರ್ಧ್ವಮುಖಿ ರಚನೆಯಲ್ಲಿ (ಹೊರಭಾಗದ ರಚನೆಗಳು) ಆರು ಅಂಗಗಳನ್ನು ಗುರುತಿಸಲಾಗಿದೆ. ಈ ಆರು ಅಂಗಗಳನ್ನು ಹೊಂದಿರುವ ದೇವಾಲಯಗಳು ಷಡ್ವರ್ಗ ದೇವಾಲಯಗಳು ಎಂದೆನಿಸಿಕೊಳ್ಳುತ್ತದೆ. ಷಡ್ವರ್ಗ ಕ್ರಮದಲ್ಲಿ ಅಧಿಷ್ಠಾನವು ಮೊದಲ ಭಾಗವಾದ್ದರಿಂದ ಶಾಸ್ತ್ರಗ್ರಂಥಗಳು ಈ ಭಾಗವನ್ನು 'ಅಧ್ಯಾಂಗ' ಎಂದು ಕರೆದಿದೆ. ಶಾಸ್ತ್ರಗ್ರಂಥಗಳು ಅಧಿಷ್ಠಾನವನ್ನು ಕುಮುದ ಅಂಗದ ಆಧಾರ ಮೇಲಿನಿಂದ ಪಾದಬಂಧ, ಪ್ರತಿಬಂಧ ಎಂದು ವಿಂಗಡಿಸಲಾಗಿದೆ. ಅಧಿಷ್ಠಾನದಲ್ಲಿ ಕುಮುದ ಅಂಗವೇ ಇರದಿದ್ದಲ್ಲಿ ಅದು ಮಂಚಕ ರೀತಿ ಎಂದು ಸೂಚಿಸಿವೆ. ನೊಳಂಬೇಶ್ವರ ದೇವಾಲಯವು ೨ ಅಡಿ ಎತ್ತರದ ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನವು ಉಪಾನ, ಕುಮುದ, ತ್ರಿಪಟ್ಟಕುಮುದ, ಜಗತಿ, ಭಾಗಗಳನ್ನು ಒಳಗೊಂಡಿದೆ. ಈ ಪಟ್ಟಿಕೆಗಳ ಮೇಲೆ ಯಾವುದೇ ರೀತಿಯ ಕೆತ್ತನೆಗಳು ಕಂಡುಬರುವುದಿಲ್ಲ. ದೇವಾಲಯದ ಭಿತ್ತಿಯನ್ನು ಇತ್ತೀಚಿಗೆ ಜೀರ್ಣೋದ್ಧಾರ ಮಾಡಲಾಗಿದೆ. ದೇವಾಲಯದ ಸಭಾಮಂಟಪದ ಕಪೋತವನ್ನು ಮಲೆನಾಡಿನ ಶೈಲಿಯ ಇಳಿಜಾರಾದ ಮಾಡಿನ ರಚನೆಯಂತೆ ಕಪೋತವನ್ನು ನಿರ್ಮಿಸಲಾಗಿದೆ. ಚಜ್ಜಾದ ಮೇಲ್ಭಾಗದಲ್ಲಿ ಪ್ರಸ್ತರ ಕಂಡುಬರುತ್ತದೆ. ಪ್ರಸ್ತರ ಶಾಲ ಭಾಗದಲ್ಲಿ ಶಿವಪಾರ್ವತಿಯ ಸುಂದರ ಶಿಲ್ಪಗಳಿವೆ

ಕೆರೆಗುಡಿಹಳ್ಳಿ ಗ್ರಾಮದಲ್ಲಿ ಕಂಡುಬರುವ ದೇವಾಲಯಗಳು ನೊಳಂಬೇಶ್ವರ ದೇವಾಲಯ, ಸಿದ್ದೇಶ್ವರ ದೇವಾಲಯ, ಶಾರದ ದೇವಾಲಯ ಈ ಮೂರು ದೇವಾಲಯಗಳು ಒಂದೇ ಪ್ರಕಾರದ ಒಳಗಡೆಯೇ ಬರುತ್ತದೆ. ದ್ವಾರಮಂಟಪಕ್ಕೆ ಹೊಂದಿಕೊಂಡಂತೆ ಪ್ರಕಾರಗೋಡೆ ಇದೆ ಮೆಟ್ಟಿಲುಗಳನ್ನು ಹೊಂದಿದ್ದು ಒಳಗಡೆ ಹೋದರೆ ದ್ವಾರಮಂಟಪದ ಎಡ ಪಕ್ಕದಲ್ಲಿ ಒಂದು ಚಿಕ್ಕಗುಡಿ ಇದೆ, ಇದರಲ್ಲಿ ಅಂತರ್ಗದ ಲಿಂಗವು ಇದನ್ನು ಬಾಳೆಕಾಯಿ ಸಿದ್ದಪ್ಪ ಎಂದು ಕರೆಯುತ್ತಾರೆ. ಪಕ್ಕದಲ್ಲಿ ಸಣ್ಣ ನಂದಿಯ ಶಿಲ್ಪವಿದೆ ಪಕ್ಕದಲ್ಲಿ ಮುಕ್ಕಾದ ಸೂರ್ಯನ ಶಿಲ್ಪವಿದ್ದು, ಸ್ವಲ್ಪ ದೂರದಲ್ಲಿ ಉದ್ದನೆಯ ಲಿಂಗಮಾತ್ರ ಹೊರಭಾಗದಲ್ಲಿದೆ. ದೇವಾಲಯದಲ್ಲಿ ಗೋಡೆಗೆ ತಾಗಿಕೊಂಡು ಗಣೇಶನ ಕೀರಿಟ ಮಾತ್ರ ಉಳಿದುಕೊಂಡಿದೆ. ಸ್ವಲ್ಪ ಬಲಭಾಗಕ್ಕೆ ಬಂದರೆ ಸಪ್ತಮಾತ್ರಿಕೆಯರ ಶಿಲ್ಪವಿದೆ, ದೇವಾಲಯದ ಕೆಲವು ಕಲ್ಲುಗಳು ಹೊರಗಡೆ ಬಿದ್ದಿವೆ. ಅಲ್ಲಿಂದ ಮುಂದೆ ಸಾಗಿದರೆ ಶಾಸನಗಳನ್ನು ನಿಲ್ಲಿಸಿದ್ದಾರೆ, ಇನ್ನು ಮುಂದಕ್ಕೆ ಸಾಗಿದರೆ ಶಾರದ ದೇವಿಯ ದೇವಾಲಯವಿದೆ ಅದನ್ನು ಜಿರ್ಣೋದ್ಧಾರ ಮಾಡಿದ್ದಾರೆ, ಅಲ್ಲಿಂದ ಮುಂದೆ ಸಾಗಿದರೆ ಹಿಂಭಾಗದ ಪ್ರಕಾರ ಗೋಡೆ ಇದೆ, ಅಲ್ಲಿಂದ ಸುತ್ತಾಗಿ ಉತ್ತರಕ್ಕೆ ಬಂದರೆ ಎರಡು ಶಿವಲಿಂಗಗಳನ್ನು ಒಳಗೊಂಡ ದೇವಾಲಯವಿದೆ. ಒಂದು ಲಿಂಗ ಪೂರ್ವ ಇನೊಂದು ಪಶ್ಚಿಮಕ್ಕೆ ಮುಖವಾಗಿವೆ ಅವುಗಳನ್ನು ಉಜನಿ ಸಿದ್ದೇಶ್ವರ (ಉಜನೆಪ್ಪ) ಎಂಬುದಾಗಿ ಹೇಳುತ್ತಾರೆ. ಪಶ್ಚಿಮದ ಗರ್ಭಗುಡಿಯಲ್ಲಿ ನೆಲದ ಮಟ್ಟದಲ್ಲಿರುವ ಶಿವಲಿಂಗ ಅದು ಪಾಣಿಪಟ್ಟಲು ಪಶ್ಚಿಮಮುಖವಾಗಿದ್ದು ಅಂತರಾಳದಲ್ಲಿ ನಂದಿಯ ಶಿಲ್ಪವಿದೆ.

ಪೂರ್ವದ ಗರ್ಭಗೃಹದಲ್ಲಿ ಪೂರ್ವಮುಖದ ಪಾಣಿವಟ್ಟಲು ಅಂತರ್ಗತ ನೆಲಮಟ್ಟದ ಲಿಂಗವಿದ್ದು ಅಂತರಾಳದಲ್ಲಿ ಎರಡು ಶಿವಲಿಂಗಗಳು ಒಂದೇರೀತಿ ಇವೆ ಎರಡು ಗರ್ಭಗೃಹದ ದ್ವಾರಬಾಗಿಲಲ್ಲಿ ದ್ವಾರಪಾಲಕರು, ಪೂರ್ವದ ಗರ್ಭಗೃಹದ ಒಳಗಡೆ ಸೂರ್ಯನ ಮೂರ್ತಿ ಇದೆ. ಎರಡು ಲಲಾಟಗಳಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ೮ ಕಂಬಗಳಿಂದ ಕೂಡಿದ ನವರಂಗ ಎರಡು ಗರ್ಭಗುಡಿಯ ಮಧ್ಯದಲ್ಲಿದೆ ನಾಲ್ಕು ಕಂಬಗಳು ಮಧ್ಯದಲ್ಲಿದೆ. ಇದು ದ್ವಿಕೂಟ ದೇವಾಲಯದಂತೆ ಕಂಡುಬರುತ್ತದೆ.


ದೇವಾಲಯ ಸಂಕೀರ್ಣದಲ್ಲಿ ಹಲವು ದೇವಾಲಯಗಳಿದ್ದು ಎಲ್ಲಾ ಲಕ್ಷಣಗಳನ್ನು ಗಮನಿಸಿದರೆ ಇದನ್ನು ನೊಳಂಬ ಅರಸರು ಕಟ್ಟಿಸಿದ್ದಾರೆ ಎನ್ನಬಹುದು. ನೊಳಂಬರ ದೇವಾಲಯಗಳಲ್ಲಿ ನಂದಿ ಇವರ ರಾಜ ಲಾಂಛನವಾಗಿದ್ದರಿಂದ ನಂದಿಗಾಗಿ ವಿಶೇಷ ಮಂಟಪಗಳನ್ನು ಕಟ್ಟಿದ ಅನೇಕ ಉದಾಹರಣೆಗಳು ನಮಗೆ ಸಿಗುತ್ತವೆ. ನಂತರ ದೇವಾಲಯವನ್ನು ಜೀರ್ಣೋದ್ದಾರ ಮಾಡುವಾಗ ಹಲವು ಬದಲಾವಣೆಗಳಾಗಿವೆ. ಇವುಗಳನ್ನು ಒಳಗೊಂಡಂತೆ ಚೌಕಕಾರದ ಎತ್ತರವಾದ ಕೆರೆಯ ಏರಿಯ ಮೇಲೆ ಕೋಟೆಯ ರೀತಿಯಲ್ಲಿ ನಾಲ್ಕು ಭಾಗಗಳಲ್ಲಿ ಬುರುಜಿನ ರೀತಿಯಲ್ಲಿ ಸುತ್ತಲು ಪ್ರಾಕಾರ ಗೋಡೆಯನ್ನು ನಿರ್ಮಾಣಮಾಡಿ ಎತ್ತರವಾದ ಪ್ರದೇಶದಲ್ಲಿ ದೇವಾಲಯವನ್ನು ನಿರ್ಮಾಣ ಮಾಡಿದ್ದರು, ಮೊದಲು ರಸ್ತೆಯು ಪ್ರಾಕಾರ ಗೋಡೆಯ ಹೊರಗೆ ಇತ್ತು ನಂತರದಲ್ಲಿ ರಸ್ತೆ ಮಾಡುವಾಗ ಕಲ್ಲಿನ ಪ್ರಕಾರ ಗೋಡೆಯನ್ನು ತೆಗೆದು ರಸ್ತೆಯನ್ನು ಮಧ್ಯದಲ್ಲಿಯೆ ಮಾಡಿದ್ದಾರೆ. ಕೆಲವರು ನಿಧಿಯಸೆಗಾಗಿ ಪ್ರಕಾರ ಗೋಡೆಯನ್ನು ಕೆಡವಿದ್ದಾರೆ, ಹೊರಭಾಗದಲ್ಲಿದ್ದ ರಸ್ತೆ ಈಗ ಪ್ರಾಕಾರಗೋಡೆಯ ಒಳಗಡೆ ಮಾಡಿದ್ದರಿಂದ. ದೇವಾಲಯದ ಭಾಗಕ್ಕೆ ಹಾನಿಯಾಗಿದೆ. ಮತ್ತು ಕೆಲವು ಕಿಡಿಗೇಡಿಗಳೂ ಸಹ ಪದೆ ಪದೆ ದೇವಾಲಯ ಮೂರ್ತಿಗಳನ್ನು ವಿರೂಪಗೊಳಿಸಿದ್ದಾರೆ. ಇತ್ತಿಚೀಗೆ ನಂದಿಯ ಮೇಲೆ ಕಿಡಿಗೇಡಿಗಳು ಹಾಳುಮಾಡಿದಾಗ ಪೋಲಿಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ ಮತ್ತು ದೇವಾಲಯದಲ್ಲಿ ಸಿಸಿ ಟಿವಿಗಳನ್ನು ಅಳವಡಿಸುತ್ತಿದ್ದಾರೆ ಇದೆ ರೀತಿ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳದಿದ್ದರೆ ದೇವಾಲಯಗಳು ಸಂಪೂರ್ಣವಾಗಿ ನಶಿಸಿ ಹೋಗುತ್ತವೆ.

## ಆಕರ ಗ್ರಂಥಗಳು


೧. ಶಾಸನ ಸಂ. ೧, ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨. ಕು.ಬ. ಸದಾಶಿವಪ್ಪ-೨೦೧೮, ಹರಪನಹಳ್ಳಿ ತಾಲ್ಲೂಕು ಗ್ಯಾಸೆಟಿಯರ್ ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.
೩. ಟಿ. ಗಿರಿಜಾ ೨೦೧೯, ದಾವಣಗೆರೆ ಇದು ನಮ್ಮ ಜಿಲ್ಲೆ, ಗಿರಿಶೈಲ ಪ್ರಕಾಶನ, ದಾವಣಗೆರೆ ಮರುಮುದ್ರಣ.
೪. ಪ್ರವೀಣ ದೊಡ್ಡಗೌಡ್ರ, ೨೦೧೮, ದಾವಣಗೆರೆ ಜಿಲ್ಲೆಯ ಪುರಾತತ್ವ ನೆಲೆಗಳು ಮತ್ತು ಅವಶೇಷಗಳ ಅಧ್ಯಯನ, ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.
೫. ಕ್ಷೇತ್ರಕಾರ್ಯ.

# ಸಮನ್ವಯ

ಡಾ. ನಾಗರಾಜ ಡಿ. ಮುರಗೋಡ



# ಸಮನ್ವಯ

(ಅಂತರಾಷ್ಟ್ರೀಯ ವಿಚಾರ ಸಂಕಿರಣದ ಸಂಶೋಧನ ಪ್ರಬಂಧಗಳ ಸಂಕಲನ)

ಡಾ. ನಾಗರಾಜ ಡಿ. ಮುರಗೋಡ

ಪ್ರಕಾಶಕರು
**ಅನಂತ ಪ್ರಕಾಶನ**
ನಂ. 103/ಎ, 3ನೇ ಮುಖ್ಯ ರಸ್ತೆ, 2ನೇ ಷಾಪ್ ಲೈನ್,
ಟಾಟಾ ಸಿಲ್ಕ್‌ಫಾರಂ, ಬಸನವನಗುಡಿ,
ಬೆಂಗಳೂರು-560 004
Mobile : 9972129376

**Samanvaya** - A collection of Articles by various scholars

Editor's Name : Dr. Nagaraj D. Murgod
Published by : Anant Prakashana, Bangalore
First Impression : 2020
Copies : 1000
Pages : xviii + 216
Price : Rs. 150/-
Paper Used : 70 GSM
Copy Right : Editor
Cover Design : Chittar Kala Balaga, Dharawad
DTP : Ravi Kammar
Printers : B G Printers, Dharwad
ISBN: : 978-81-938117-5-7
Book Size : 1/8th Demi

---

**ಸಮನ್ವಯ –**
ವಿವಿಧ ಸಂಶೋಧಕರಿಂದ ಬರೆಯಲ್ಪಟ್ಟ ಸಂಶೋಧನ ಲೇಖನಗಳ ಸಂಗ್ರಹ

ಸಂಪಾದಕರು : ಡಾ.ನಾಗರಾಜ ಡಿ.ಮುರಗೋಡ
ಪ್ರಕಾಶಕರು : ಅನಂತ ಪ್ರಕಾಶನ
ನಂ.೧೦೩/ಎ, ೩ನೇ ಮುಖ್ಯ ರಸ್ತೆ,
೨ನೇ ಷಾಪ್ ಲೈನ್, ಟಾಟಾ ಸಿಲ್ಕ್ ಫಾರಂ,
ಬಸವನಗುಡಿ, ಬೆಂಗಳೂರು-೫೬೦೦೦೪
ಮೋಬೈಲ್ : ೯೯೭೨೧೨೯೩೭೬
ಪುಟಗಳು : xviii + ೨೧೬
ಪ್ರಥಮ ಮುದ್ರಣ : ೨೦೨೦
ಹಕ್ಕುಗಳು : ಸಂಪಾದಕರು
ಬೆಲೆ : ರೂ. ೧೫೦/-
ಅಕ್ಷರ ಸಂಯೋಜನೆ : ರವಿ ಕಮ್ಮಾರ
ಮುಖಪುಟ : ಚಿತ್ತಾರ ಕಲಾ ಬಳಗ ಧಾರವಾಡ
ಮುದ್ರಕರು : ಬಿ. ಜಿ. ಪ್ರಿಂಟರ್ಸ್, ಧಾರವಾಡ



ಹಿರಿಯ ಪ್ರಾಧ್ಯಾಪಕರು
ಹಾಗೂ
ನನಗೆ ಮಾರ್ಗದರ್ಶಕರೂ ಆದ
ವೇದಮೂರ್ತಿ
**ಪ್ರೊ. ಫ್ಲಿ. ಡಿ. ವಸ್ತ್ರದ**
ಅವರಿಗೆ

15. ಅಲಕ್ಷಿತ ವಚನಕಾರರು ಹಾಗೂ ಸಾಮಾಜಿಕ ಕಳಕಳಿ ..88
– ಪ್ರೊ. ದೊಡ್ಡಬಸಪ್ಪ ಸಿದ್ದನಗೌಡ ಹುಣೇದಗಟ್ಟಿ

16. ಸೂಫಿಜಂ ಮತ್ತು ತತ್ವಪದಕಾರರ ಮೀಮಾಂಸೆಗಳ ಪ್ರತಿಧ್ವನಿ: ಚಕ್ಕೇನಕೊಪ್ಪದ ಮೌನಯೋಗಿ ಶ್ರೀ ಚನ್ನವೀರ ಶರಣರ ಮಾತಿನ ಕಿಡಿಗಳು ..95
–ಡಾ.ಮೈತ್ರೇಯಿಣಿ ಗದಿಗೆಪ್ಪಗೌಡರ

17. ಸೂಫಿ ಮಹಿಳೆ ಹಜಾ ಖಾತೂನ್ ..102
– ಡಾ.ನಿವೇದಿತಾ ಸ್ವಾಮಿ

18. ದಾಸ ಸಾಹಿತ್ಯಕ್ಕೆ ಪುರಂದರದಾಸರ ಕೊಡುಗೆ ..108
– ಡಾ.ಜೆ.ಜಿ. ಜೋಶಿ

19. ಕನಕದಾಸರ ರಾಮಧಾನ್ಯ ಚರಿತೆಯಲ್ಲಿ ಆಹಾರ ಸಾಂಸ್ಕೃತಿಕ ಸಂಘರ್ಷ ..114
– ಡಾ. ಶಿವಲಿಂಗಪ್ಪ ಆಯ್. ಭಂಡಾರಿ

20. ಅನುಭವ ಮಂಟಪದಲ್ಲಿ ಅಲ್ಲಮ ಮತ್ತು ಅಕ್ಕನ ಸಂವಾದ ..123
– ಸರಸ್ವತಿ ಜಿ.

21. ವಚನ ಸಾಹಿತ್ಯದಲ್ಲಿ ಸಮಾನತೆ ; ಸ್ತ್ರೀ–ಪುರುಷ ಸಮಾಜ ..127
– ಪ್ರೊ. ಅಂಜಿನಪ್ಪ ಡಿ.

22. ವೈದಿಕ ಪರಂಪರೆಯ ಜೊತೆಗೆ ಕನಕ ಹೊಂದಾಣಿಕೆ ಮತ್ತು ಸಂಘರ್ಷ ..132
– ವೀಣಾ ಎಲ್. ವೈ.

23. ಸಮಾಜಮುಖಿ ಸಂತರು ನಮ್ಮ ಗುರುಕುಲ ಭಾಸ್ಕರರು ..137
– ಪ್ರೊ. ಪ್ರಸನ್ನ ಜೋಗುರ

24. ವಚನಸಾಹಿತ್ಯದಲ್ಲಿ ಕಾಯಕ, ದಾಸೋಹ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆ ..144
– ಡಾ.ಎಸ್.ಬಿ. ರಾಠೋಡ

25. ಬಸವಣ್ಣನವರ ದೃಷ್ಟಿಯಲ್ಲಿ ದೇವರು ಮತ್ತು ಧರ್ಮ ..151
– ಡಾ. ಪಂಡಿತ ಬಿ.ಕೆ.

25. ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಸಾಮಾಜಿಕ ಚಿಂತನೆ ..154
– ಡಾ. ಸುನಂದಾ ಎಸ್.ಹಾಡಕರ

26. ವಚನ ಸಾಹಿತ್ಯದಲ್ಲಿ ಮಾನವೀಯತೆ ..162
– ಪ್ರೊ. ಪ್ರತಿಕಾ ಎಮ್. ತಳವಾರ

27. ಬಸವಣ್ಣನವರ ವಚನಗಳಲ್ಲಿ ಮಾನವೀಯ ನೆಲೆಗಟ್ಟು ..167
– ಪ್ರೊ. ಪಿ.ವಿ. ಮಹಲಿನಮಠ





28. ಪೂಜ್ಯ ಶರಣಬಸವಪ್ಪ ಅಪ್ಪ ಅವರ ಆಧುನಿಕ ವಚನಗಳಲ್ಲಿ ಭಕ್ತಿ ..171
– ಡಾ. ಮಲ್ಲಿಕಾರ್ಜುನ ಪಿ. ಹುಲ್ಲೆ

29. ಕನ್ನಡ ಸಾಹಿತ್ಯಕ್ಕೆ ವಿಶ್ವಕರ್ಮ ಏಕದಂಡಿಗಿ ಮಠದ ಕೊಡುಗೆ ..175
– ಶ್ರೀ ಜಗದೀಶ ಮೋನಪ್ಪ

30. ಸಿದ್ಧಗಿರಿ (ಕಾಡಸಿದ್ದೇಶ್ವರ) ಮಠ–ಪರಿಚಯ ..179
– ಆರ್.ಎ. ಬಡಿಗೇರ

31. ವಿವೇಕ ಚಿಂತಾಮಣಿಯೆಂಬ ಜ್ಞಾನ ಭಂಡಾರ ..184
– ಬಸವರಾಜ ಹಡಪದ

32. ವಚನ ಸಾಹಿತ್ಯದಲ್ಲಿ ಮಹಿಳೆ ..187
– ಡಾ. ನಾಗರಾಜ ಡಿ. ಮುರಗೋಡ

33. ಕಲ್ಯಾಣ ಕರ್ನಾಟಕದ ಮುಸ್ಲಿಂ ತತ್ವಪದಕಾರರು ..193
– ಡಾ.ಬಸವರಾಜ ಸುಂಕೇಶ್ವರ

34. ಕಾಯಕ ದಂಪತಿಗಳು ಆಯ್ದಕ್ಕಿ ಲಕ್ಕಮ್ಮ–ಮಾರಯ್ಯ ..204
– ಡಾ.ವಿಜಯಮಾಲಾ ದುಂ. ನಾಗನೂರಿ

35. ಮಹಾದೇವಿ ಅಕ್ಕನ ವಚನಗಳ ಪ್ರಸ್ತುತತೆ ..211
– ಡಾ. ರೇಣುಕಾ ಶಂ. ಹೆಬ್ಬಾಳ

## ವಚನ ಸಾಹಿತ್ಯದಲ್ಲಿ ಸಮಾನತೆ ; ಸ್ತ್ರೀ-ಪುರುಷ ಸಮಾಜ

✧✧ ಪ್ರೊ. ಅಂಜಿನಪ್ಪ ಡಿ.

ಕನ್ನಡ ಸಾಹಿತ್ಯಕ್ಕೆ ಹನ್ನೆರಡನೇಯ ಶತಮಾನ ತುಂಬಾ ವಿಶಿಷ್ಟವಾದುದು. ಈ ಸಂದರ್ಭದಲ್ಲಿ 'ವಚನ' ಎಂಬ ಸಾಹಿತ್ಯ ರೂಪ ಜನ್ಮತಾಳಿತು. 'ವಚನ' ವಿಶಿಷ್ಟವಾದ ರೂಪವಾಗಿದೆ. ಜಗತ್ತಿನ ಸಾಹಿತ್ಯ ಪ್ರಕಾರದಲ್ಲೇ ಶ್ರೇಷ್ಟ ಪ್ರಕಾರ. ಕನ್ನಡದಲ್ಲಿ ಬಿಟ್ಟರೆ ಮತ್ತಾವ ಸಾಹಿತ್ಯದಲ್ಲೂ ಸಿಗಲಾರದು. ವಚನಗಳನ್ನು ಮುನ್ನೂರಕ್ಕೂ ಹೆಚ್ಚು ವಚನಕಾರರು ಸೃಷ್ಟಿಸಿದರು.

ಶರಣರು ಹೆಣ್ಣು ಗಂಡೆಂಬ ಭೇದ ಮಾಡಲಿಲ್ಲ. ಜಾತಿ ಮತವೆಂಬ ಭೇದ ಮಾಡಲಿಲ್ಲ. ಮೇಲು ಕೀಳು ಸಮಾಜ ಸೃಷ್ಟಿಸಲಿಲ್ಲ. ಸಮಾನತೆಯ ಸಂದೇಶವನ್ನು ಸಾರಿದರು. ಮಹಿಳೆಯರಿಗೆ ಅವಕಾಶ ಸಿಕ್ಕಿತು. ಅಕ್ಕಮಹಾದೇವಿ ಪುರುಷ ಪ್ರಧಾನ ವ್ಯವಸ್ಥೆಯನ್ನು ತಿರಸ್ಕರಿದಳು. ಹೊಸ ಕ್ರಾಂತಿಯನ್ನು ಸೃಷ್ಟಿದಳು. ಬಸವಣ್ಣ ಸಮಜೋಧಾರ್ಮಿಕ ನಿರ್ಣಯ ತೆಗೆದುಕೊಂಡರು. ಈ ಸಾಹಿತ್ಯ ಪ್ರತಿಯೊಂದನ್ನು ಸಮಾನತೆಯಿಂದ ನೋಡಿತು. ಸ್ರೀ, ಪುರುಷ, ಸಮಾಜ, ಕಾಯಕ, ವರ್ಗ, ಜಾತಿ, ಧರ್ಮ ಹೀಗೆ ಎಲ್ಲವನ್ನೂ ಏಕ ದೃಷ್ಟಿಯಿಂದ ಕಂಡಿತು.

ಅದರಲ್ಲೂ ಮುಖ್ಯವಾಗಿ ಸ್ತೀ, ಪುರುಷರು ಸಮಾನರು ಎಂದು ಸಾರಿತು. ಸ್ತ್ರೀ-ಪುರುಷರ ದೇಹಗಳಲ್ಲಿ ವ್ಯತ್ಯಾಸವಿದೆಯೇ ಹೊರತು, ಆತ್ಮಗಳಲ್ಲಿ ಅಲ್ಲ ಎಂದರು. ಹಿಂದೆ ಭಾರತೀಯ ಧರ್ಮಗಳಲ್ಲಿ ಪುರುಷನಿಗಿರುವ ಧಾರ್ಮಿಕ ಹಕ್ಕು ಸ್ತ್ರೀಗಿರಲಿಲ್ಲ. ಯಜ್ಞ, ಯಾಗ, ಪೂಜೆ ಮುಂತಾದ ಧಾರ್ಮಿಕ ವಿಧಿವಿಧಾನಗಳ ಕ್ರಿಯೆಗಳನ್ನು ಮಾಡಬಾರದೆಂಬ ನಿಷೇಧವಿದೆ. ಆದರೆ ಶರಣರ ಪ್ರಕಾರ ದೇವರ ದೃಷ್ಟಿಯಲ್ಲಿ ಸ್ತ್ರೀ ಪುರುಷರು ಸಮಾನರು ಎಂದು ಹೇಳಿದರು.

ವಚನಕಾರರು 'ಎಲ್ಲರೂ ಹುಟ್ಟಿನಿಂದ ಸಮಾನರು' ಎಂದು ಹೇಳಲು ಎರಡು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ ಆತ್ಮಕ್ಕೆ ಜಾತಿಯಿಲ್ಲ. ಎಲ್ಲರ ಆತ್ಮಗಳೂ ದೇವನ ಅಂಶಗಳೇ ಆಗಿವೆ. ಆದುದರಿಂದ ಯಾರೂ ಶ್ರೇಷ್ಠನಲ್ಲ, ಯಾರೂ ಕನಿಷ್ಠನಲ್ಲರೆಂದರು.

ದಾಸಿಮಯ್ಯನು–

ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮವನೇನೆಂಬೆ ರಾಮನಾಥ

ಎಂದ್ಹೇಳುವ ಮೂಲಕ ಇದು ನೈಸರ್ಗಿಕ ಕ್ರಿಯೆ. ಇದನ್ನು ತಿರಸ್ಕರಿಸುವ, ಅವಹೇಳನ ಮಾಡುವ ಕ್ರಿಯೆ ಸರಿಯಲ್ಲ ಎಂದು ಹೇಳುವರು. ಆದ್ದರಿಂದ ಹೆಣ್ಣೆಂದು ಹೆಣ್ಣನ್ನು ಯಾರೂ ಕಡೆಗಣ್ಣಿನಿಂದ ಕಾಣಬಾರದು ಎಂದು ಹೇಳುವರು.

**ಮತ್ತೆ ಗೊಗ್ಗವ್ವೆ –**

ಗಂಡು ಮೋಹಿಸಿ ಹೆಣ್ಣು ಹಿಡಿದೆಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡು ಹಿಡಿದೆಡೆ
ಉತ್ತರವಾವುದೆಂದರಿಯಬೇಕು?"

ಎಂದು ಹೇಳುತ್ತಾಳೆ.

ಅನಾದಿಕಾಲದಿಂದಲೂ ಹೆಣ್ಣು ಪುರುಷನ ಅಡಿಯಾಳಾಗಿಯೇ ಬದುಕಿದ್ದಾಳೆ. ಮಕ್ಕಳ ಹೆರುವ ಯಂತ್ರವಾಗಿ ರೂಪಿತಗೊಂಡಿರುವಳೇ ಪುರುಷನ ಆಸ್ತಿಯಾಗಿದ್ದಾಳೆ. ಈಗ ಪ್ರಜ್ಞೆ ನಿಚ್ಚಳವಾದಾಗ ಅದೇ ಹೊರತು ಸಮಾನವಾಗಿ ಪರಿಗಣಿಸಲ್ಪಡಲಿಲ್ಲ. ಗಂಡು ಹೆಣ್ಣಿನ ಒಡವೆಯಾಗಲು ಸಿದ್ಧವೆ? ಇಲ್ಲವೆಂದು ಗೊಗ್ಗವ್ವೆ ಹೇಳುತ್ತಾಳೆ. ಯಾರಿಗೆ ಯಾರು ಅಡಿಯಾಳಾಗದೇ

"ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿ ನಾಥನು ಪರಿಪೂರ್ಣ"ಎನ್ನುತ್ತಾಳೆ. ಗೊಗ್ಗವ್ವೆಯ ಹಾಗೆ

**ದಾಸಿಮಯ್ಯ–**

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದೀತೆ ?
ಒಡೆಯನ ಪ್ರಾಣಕ್ಕೆಇದ್ದೀತೆ ಯಜ್ಞೋಪವೀತ ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ ?
ನೀ ತೊಡಕಿಕ್ಕಿದ ತೊಡಕ ನೀ ಲೋಕದ ಜನರೆತ್ತ ಬಲ್ಲರೈ"ರಾಮನಾಥ

ಎಂದ್ಹೇಳುವ ಈ ವಚನದ ಮೊದಲನೆಯ ಸಾಲು 'ಲಿಂಗ'(ಗಂಡು,ಹೆಣ್ಣು) ಸಂಬಂಧಿ ಸಮಾನತೆ ಬಗ್ಗೆ ಹೇಳುತ್ತದೆ. ಎರಡನೆಯ ಸಾಲು ವರ್ಗ (ಕೆಳ, ಮೇಲೆ) ಸಂಬಂಧಿ ಸಮಾನತೆ ಬಗ್ಗೆ ಹೇಳುತ್ತದೆ ಮತ್ತು ಮೂರನೆಯ ಸಾಲು ಜಾತಿ ಸಂಬಂಧಿ ಸಮಾನತೆ ಬಗ್ಗೆ ಬೆಳಕು ಚೆಲ್ಲುತ್ತವೆ. ಇವು ಯಾವುವೂ ಹುಟ್ಟಿದ ಸಂಗತಿಗಳಲ್ಲ, ಇವು ಕಟ್ಟಿಕೊಂಡ ಸಂಗತಿಗಳು ಎಂಬುದನ್ನು ಕೊನೆಯ ಸಾಲುಗಳು ಹೇಳುತ್ತವೆ.

ಅಸಮಾನತೆ ಎಂಬುದು ಜೈವಿಕ ನಿಯತಿಯಲ್ಲ. ಅದು ಸಾಮಾಜಿಕ ವಿಕೃತಿ ಎಂಬ ವಿಚಾರದ ಕಡೆ ದಾಸಿಮಯ್ಯ ನಮ್ಮ ಗಮನ ಸೆಳೆಯುತ್ತಿದ್ದಾನೆ. ಇಲ್ಲಿ



ದಾಸಿಮಯ್ಯ 'ಮಡದಿ–ಗಂಡ, 'ಒಡೆಯ–ಅಂತ್ಯಜ', 'ಯಜ್ಞೋಪವೀತ–ಹಿಡಿಗೋಲ' ಇವುಗಳನ್ನು ಮುಖಾಮುಖಿಯಾಗಿಸುತ್ತಿದ್ದಾನೆ. ಪ್ರಾಣಕ್ಕೆ ಲಿಂಗಭೇದ ವಿರುವುದಿಲ್ಲ, ಹುಟ್ಟುವಾಗಲೇ ಯಾರೂ ಯಜ್ಞೋಪವೀತವನ್ನು ಧರಿಸಿಕೊಂಡೇ ಹುಟ್ಟುವುದಿಲ್ಲ, ಅಂತ್ಯಜನೆಂದು ಸಮಾಜ ಮೂಲೆಗೆ ತಳ್ಳಿರುವ ಜನರು ಅಂತ್ಯಜರಾಗೇ ಹುಟ್ಟಿರುವುದಿಲ್ಲ, ಅಂತ್ಯಜರು–ಒಡೆಯರು, ಯಜ್ಞೋಪವೀತ–ಹಿಡಿಗೋಲ–ಇವೆಲ್ಲವು ಸಮಾಜವು ತನ್ನ ಅನುಕೂಲಕ್ಕೆ ರೂಪಿಸಿಕೊಂಡ ಉಪಾದಿಗಳು. ಜಾತಿ–ವರ್ಗ–ಲಿಂಗ–ಸಂಬಂಧಿ ಸಮಾನತೆಯ ಸಂಗತಿಗಳನ್ನು ಒಂದೇ ನೆಲೆಯಲ್ಲಿ ಹಿಡಿದಿಡಲು ದಾಸಿಮಯ್ಯಗೆ ಸಾಧ್ಯವಾಗಿದೆ. ಒಂದು ಬಗೆಯಲ್ಲಿ ಈ ವಚನವು ಸಮಾನತಾ ಪ್ರಣಾಳಿಕೆಯ ವಿಶ್ವರೂಪ ದರ್ಶನವನ್ನು ಮಾಡಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಸ್ತ್ರೀ ವಚನಕಾರರು ತಮ್ಮನ್ನು ತಾವು ಮೊದಲು ಗುರುತಿಸಿಕೊಂಡರು. ಇದು ಅವರು ಮಾಡಿದ ಮೊದಲ ಕ್ರಾಂತಿ. ಸಮಾನತೆಯ ವಾದವನ್ನು ಎತ್ತಿಹಿಡಿದರು.

"ಮೊಲೆ ಮೂಡಿ ಇದ್ದದ್ದೆ ಹೆಣ್ಣೆಂದು ಪ್ರಮಾಣಿಸಲಿಲ್ಲ. ಮೀಸೆ ಕಠಾರವಿದ್ದಡೆ ಗಂಡೆಂದು ಪ್ರಮಾಣಿಸಲಿಲ್ಲ. ಅದು ಜಗದ ಹಾಗೆ ಬಲ್ಲವರ ನೀತಿಯಲ್ಲ"ಎಂದು ಸತ್ಯಕ್ಕ ಹೇಳುತ್ತಾಳೆ.

'ಕೂಟಕ್ಕೆ ಸತಿ–ಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಡಲುಂಟೇ' ಎಂದು ಆಯ್ದಕ್ಕಿ ಲಕ್ಕಮ್ಮ ಹೇಳುತ್ತಾಳೆ. "ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀತ್ವ ನಿಮ್ಮ ಪಾದದಲ್ಲಿ ಅಡಗಿತ್ತು ಎನಗೆ ಬೇಧ ಮಾತಿಲ್ಲ" ಎಂದು ಮೋಳಿಗೆಯ ಮಹಾದೇವಿ ಹೇಳುತ್ತಾಳೆ.

"ಭಕ್ತಿಜ್ಞಾನ ಆಧ್ಯಾತ್ಮ ವಿಷಯಗಳ ಬಗ್ಗೆ ಸ್ತ್ರೀಪುರುಷರೆಂಬ ಭೇದ ಅರ್ಥಹೀನ" ಎಂದರು. ಗಜೇಶ ಮಸಣಯ್ಯನ ನಿಜಪತ್ನಿ ಹೆಣ್ಣನ್ನು ಹೀನಾಯವಾಗಿ ಕಾಣುವವರಿಗೆ "ಹೊನ್ನು ಬಿಟ್ಟು ಲಿಂಗವನೊಲಿಸಬೇಕೆಂದರು ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು ಮಣ್ಣಿಂಗಲಿಂಗಕ್ಕೂ ವಿರುದ್ಧವೇ? ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?"ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು.

ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು .ಲೋಕವೆಂಬ ಮಾಯೆಗೆ ಶರಣರ ಚಾರಿತ್ರವು ಮರುಳಾಗಿ ತೋರುವುದು ಚೆನ್ನಮಲ್ಲಿಕಾರ್ಜುನನೊಲಿದ ಶರಣರಿಗೆ ಮಾಯೆಯಿಲ್ಲ

**ಮರಹಿಲ್ಲ ಅಭಿಮಾನವೂ ಇಲ್ಲ.–ಅಕ್ಕಮಹಾದೇವಿ.**

ಹಿಂದಿನಿಂದಲೂ ಸಾಹಿತ್ಯ, ಆಧ್ಯಾತ್ಮ ಕ್ಷೇತ್ರದಲ್ಲಿ ಕೃಷಿ ಮಾಡಿದವರೆಲ್ಲಾ ಗಂಡಸರೇ ಆಗಿದ್ದರು. ಜಗತ್ತನ್ನು ಮಾಯೆ ಎಂದರು. ಹೊನ್ನು, ಮಣ್ಣು ಜೊತೆಗೆ

ಹೆಣ್ಣನ್ನೂ ಸೇರಿಸಿ ಮಾಯೆ ಎಂದರು. ಹೆಣ್ಣನ್ನು ಹೊನ್ನು ಮಣ್ಣಂತೆ ಪುರುಷನ ಸ್ವತ್ತು ಆಸ್ತಿ ಎಂಬಂತೆ ಮಾತಾಡಿದರು. ಹೆಣ್ಣಿಗೊಂದು ಅಸ್ತಿತ್ವ, ಮನಸ್ಸು, ವಿಚಾರ ಸ್ವಾತಂತ್ರ ಇದೆ ಎಂಬುದನ್ನು ಯಾರೂ ಆಲೋಚಿಸಲೇಯಿಲ್ಲ. ಹೊನ್ನು ಕಣ್ಣಳತೆಯಲ್ಲಿ ಹೆಣ್ಣು ತನ್ನ ಉಪಭೋಗದ ವಸ್ತು ಎಂಬಂತೆ ನಡೆದುಕೊಂಡರು. ಹೆಣ್ಣನ್ನು ಆಸ್ತಿಯಂತೆ ಇತರರಿಗೆ ವರ್ಗಾಯಿಸಬಹುದು ಎಂದು ಹೆಣ್ಣನ್ನೂ ವಿಲೇವಾರಿ ಮಾಡಿದರು. ಗಂಡಸು ಎಷ್ಟು ಹೆಣ್ಣನ್ನು ಬೇಕಾದರೂ ಉಪಭೋಗ ಮಾಡಬಹುದು ಎಂದು ತಿಳಿದರು. ಇಂಥಹ ಎಲ್ಲಾ ಆಲೋಚನೆಗಳನ್ನು ಪ್ರಶ್ನಿಸಿ, ಧಿಕ್ಕರಿಸಿ ಪುರುಷನಂತೆ ತನಗೂ ಒಂದು ಅಸ್ತಿತ್ವ, ಸ್ವಾತಂತ್ರ, ಚಿಂತನೆ ಇದೆ ಎಂಬುದನ್ನು ತೋರಿಸಿಕೊಟ್ಟು ಪುರುಷನ ಕಪಿಮುಷ್ಟಿಯಿಂದ ಹೊರಬಂದು ಸ್ತ್ರೀ ಸ್ವಾತಂತ್ರ್ಯ ಕಹಳೆಯೂದಿ ಜಗತ್ತಿನ ಮೊಟ್ಟಮೊದಲು ಸ್ತ್ರೀ ಸ್ವಾತಂತ್ರ ತಂದುಕೊಟ್ಟ ಮಹಿಳೆ ಅಕ್ಕಮಹಾದೇವಿ. ಗಂಡು ಹೆಣ್ಣನ್ನು ಮಾಯೆ ಎಂದು ಕರೆದರೆ, ಹೆಣ್ಣಿಗೆ ಗಂಡು ಕೂಡಾ ಮಾಯೆ ಎಂದು ಮೊದಲ ಸಲಕ್ಕೆ ಅಕ್ಕಮಹಾದೇವಿ ನಿರೂಪಿಸಿದರು.

'ಸ್ತ್ರೀ ಯ ಮುಂದೆ ಮಾಯೆ ಪುರುಗನೆಂಬ ಅಭಿಮಾನವಾಗಿ ಕಾಡಿತ್ತು'ನೋಡಾ! ಸತಿಗೆ ಪುರುಷನೇ ದೇವರು, ರಾಜ ಪ್ರತ್ಯಕ್ಷ ದೇವತಾಃ' ಎಂಬ ಅನೇಕ ಮೌಲ್ಯಗಳನ್ನು ಮಹಿಳೆಯ ಮೇಲೆ ಧರ್ಮದ ನಿಬರ್ಂಧದಲ್ಲಿ ಹೇರಲಾಗಿತ್ತು. ಚೆನ್ನಮಲ್ಲಿಕಾರ್ಜುನನೊಲಿದ ಅರಸರಿಗೆ ಮಾಯೆಯಿಲ್ಲ ಮರಗಳಿಲ್ಲ ಅನುಮಾನವು ಇಲ್ಲ. ಇಂಥಹ ಅಮೋಘ ಸತ್ಯವನ್ನು ಅಕ್ಕಮಹಾದೇವಿ ಯವರು ಹೇಳಿದರು.

ಹೆಣ್ಣನ್ನು, ಸಂಸಾರವನ್ನು ಬಿಟ್ಟರೆ ಮುಕ್ತಿ ಸಾಧ್ಯ ಅನ್ನುವುದು ಮೂರ್ಖತನ. ಧಾರ್ಮಿಕ ವಿಧಿವಿಧಾನಗಳಲ್ಲಿ ಹೆಣ್ಣಿಗೂ ಸಮಪಾಲು ಇದೆ. ದೇವರಿಗೆ ವಿರುದ್ಧವಲ್ಲದ ಅವಳು ಮನುಷ್ಯರಿಗೆ ಹೇಗೆ ವಿರುದ್ಧಳಾಗುವಳು? ಈ ಸಾಮಾಜಿಕ ಅಸಮಾನತೆಯನ್ನು ಪ್ರಶ್ನಿಸುತ್ತಾಳೆ.

ಬಸವಣ್ಣ ಹನ್ನೆರಡನೇ ಶತಮಾನದಲ್ಲಿ ಜಾತಿ ನಿರ್ಮೂಲನೆಗಾಗಿ ಪಣ ತೊಟ್ಟರು. ಕೆಳವರ್ಗದ ಜನರಿಗೆ ದೀಕ್ಷೆಯನ್ನು ನೀಡಿದರು. ಆ ಮೂಲಕ ಮನುಷ್ಯ ಜಾತಿಯನ್ನು ಎತ್ತಿಹಿಡಿದರು. ಅಂತರ್ ಜಾತಿಯ ವಿವಾಹ ಮಾಡಿಸಿದರು. ಕೆಳಜಾತಿಯವರ ಮನೆಯಲ್ಲಿ ಭೋಜನ ಮಾಡಿದರು. ಇವೆಲ್ಲದರ ಬಹುಮಾನವಾಗಿ ಬಸವಣ್ಣ ಬಿಜ್ಜಳನ ಮುಂದೆ ಅಪರಾಧಿಯಾಗಿ ನಿಲ್ಲಬೇಕಾಯಿತು. ಮುಂದೆ ಇದೇ ಅವರ ಪ್ರಾಣಕ್ಕೂ ಕುತ್ತು ತರುತ್ತದೆ ಎನ್ನುವುದು ಯಾರೂ ಕೂಡ ಊಹಿಸದ ಸಂಗತಿಯಾಗಿದೆ.



ಆಕರ ಗ್ರಂಥಗಳು

1) ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು– ಡಾ ಎಸ್. ಎಂ, ಹಿರೇಮಠ.
2) ಮಧ್ಯಕಾಲೀನ ಕನ್ನಡ ಸಾಹಿತ್ಯ – ಸಂ. ಡಾ ಅಕ್ಕಮಹಾದೇವಿ
3) ಕನ್ನಡ ಸಾಹಿತ್ಯ ಕೋಶ– ಸಂ. ರಾಜಪ್ಪ ದಳವಾಯಿ.

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎ. ಆರ್. ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ



# ಸಮನ್ವಯ

ಡಾ. ನಾಗರಾಜ ಡಿ. ಮುರಗೋಡ

ಸಿಂದಗಿಯ ಜಿ. ಪಿ. ಪೋರವಾಲ ಮಹಾವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ. ನಾಗರಾಜ ಮುರಗೋಡ ಅವರು ನಾವು ಗಮನಿಸಿದಂತೆ ಕ್ರಿಯಾಶೀಲರು ಮತ್ತು ಸೃಜನಶೀಲ ಗುಣದವರು. ನಿರಂತರ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು. ಆಧುನಿಕ ಶಿಕ್ಷಣದ ವ್ಯವಸ್ಥೆ ಬೇಡುವ ಪ್ರತಿಭೆ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನದಲ್ಲಿರುವವರು. ಆ ಪ್ರಯತ್ನದ ಒಂದು ಕೊಂಡಿಯಾಗಿ ಪ್ರಸ್ತುತ ವೈಚಾರಿಕ ಮತ್ತು ಸಂಶೋಧನಾತ್ಮಕ ಲೇಖನಗಳ ಈ ಸಂಕಲನ ಪ್ರಕಟಣೆಗೆ ಸಿದ್ಧವಾಗಿದೆ......

ಒಳ್ಳೆಯದರ ಚಿಂತನೆ ಮತ್ತು ಅಭಿವ್ಯಕ್ತಿಯಲ್ಲಿ ತಾವೂ ತೊಡಗಿ ತನ್ನಂತಹ ಅಧ್ಯಾಪಕರನ್ನೂ ತೊಡಗಿಸಿ ಬರಹದ ತೇರನ್ನು ಎಳೆಯುತ್ತಿರುವ ಡಾ. ನಾಗರಾಜ ಮುರಗೋಡರ ಸಾಂಘಿಕ ಶಕ್ತಿಗೆ ಮೊದಲ ಸಲಾಂ. ಈ ತರಹದ ಬರಹ ಕೃತಿ ಡಾ. ನಾಗರಾಜ ಅವರಿಂದ ಮತ್ತು ಎಲ್ಲಾ ಲೇಖಕ-ಉಪನ್ಯಾಸಕ, ವಿದ್ವಾಂಸ / ವಿದುಷಿಯರಿಂದ ಹೀಗೆ ಮುಂದುವರಿಯಲಿ ಅವರು ನಂಬಿದ ದೈವಗಳು ಅವರಿಗೆ ಅಧ್ಯಯನ ಕ್ರಿಯೆಗೆ ಪ್ರೇರಣೆ ನೀಡಿ ಆಶೀರ್ವದಿಸಲಿ ಎಂದು ನಾನು ನಂಬಿದ ದೈವಕ್ಕೆ ಬೇಡುತ್ತೇನೆ.

ಶುಭಂ.

ಡಾ. ಗುರುದೇವಿ ಹುಲ್ಲೆಪ್ಪನವರಮಠ
ಬೆಳಗಾವಿ (ಮುನ್ನುಡಿಯಿಂದ)

ಅನಂತ ಪ್ರಕಾಶನ
ನಂ. 103/ಎ, 3ನೇ ಮುಖ್ಯ ರಸ್ತೆ, 2ನೇ ಕ್ರಾಸ್ ಲೈನ್, ಟಾಟಾ ಸಿಲ್ಕ್ ಫಾರಂ,
ಬಸವನಗುಡಿ, ಬೆಂಗಳೂರು-560004

# ಬಹುರೂಪಿ

## ಬಹುಶಿಸ್ತೀಯ ಲೇಖನಗಳ ಸಂಗ್ರಹ

೨೦೨೦





ಸಂಪಾದಕರು

ಡಾ. ಕೃಷ್ಣಪ್ಪ ಕೆ.ಎನ್.

ಡಾ. ವಿಜಯೇಂದ್ರ ಕುಮಾರ್ ಜೆ.ಎಲ್.

ಡಾ. ಪುಟ್ಟೇಶ ಸಿ.

# ಬಹುರೂಪಿ

(ಬಹುಶಿಸ್ತೀಯ ಲೇಖನಗಳ ಸಂಗ್ರಹ)

**ಸಂಪಾದಕರು**

ಡಾ. ಕೃಷ್ಣಪ್ಪ ಕೆ.ಎನ್.

ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.

ಡಾ. ಪುಟ್ಟೇಶ ಸಿ.

**ಅದಿತಿ ಪುಸ್ತಕ**

ಕಂಡಕನಹಳ್ಳಿ, ಮರಳಕುಂಟೆ ಅಂಚೆ

ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ.

ಕರ್ನಾಟಕ

**Bahuroopi**

Bunch of Multidisciplinary Articles in Kannada

**Edited by**

**Dr. Krishnappa K.N.**

**Dr. Vijayendra Kumar G.L.**

**Dr. Puttesha C.**

Asst. Professors of Kannada

Dept. of Collegiate Education

Government of Karnataka

Email:krishnappakn@gmail.com

**Published by**

**Dr. Krishnappa K.N.**

**Adithi Pusthaka**

Kandakanahalli , Maralakunte Post,

Chikkaballapur Taluk and District. Pin: 562101.

Ph: +91 9448699849

**Printed by**

**Dr. Krishnappa K.N.**

**Adithi Printers**

Kandakanahalli , Maralakunte Post,

Chikkaballapur Taluk and District. Pin: 562101.

Ph: +91 9448699849

© Authors

**ISBN: 978-93-5408-109-5**

Pages: IV + 200

Price: RS. 220/-

Copies: 300

First Impression: 2020

Cover Page and Inner Pages Design: Dr. Krishnappa K.N.

## ಪರಿವಿಡಿ

೧. ಫ್ಯಾಂಟಸಿ ಲೋಕದ ಅನನ್ಯ ಲೇಖಕ ಎಂ.ಎಸ್.ಕೆ.ಪ್ರಭು – **ರಾಮಚಂದ್ರಪ್ಪ ವಿ.** / ೧
೨. ಸೌಂದರ್ಯಶಾಸ್ತ್ರದ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಚಿತ್ರಕಲೆ– **ಡಾ. ಕೃಷ್ಣಪ್ಪ ಕೆ.ಎನ್.**/ ೭
೩. ಜಾಗತಿಕ ಸಾಹಿತ್ಯ ಎಂದರೇನು? – **ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.** / ೧೦
೪. ಕಪ್ಪು ಪ್ರಜ್ಞೆಯ ಕುರಿತ ಒಂದು ಅವಲೋಕನ – **ಡಾ. ಪುಟ್ಟೇಶ ಸಿ.** / ೧೪
೫. ಚಕೋರಿ: ಮೌಖಿಕ ಕಥನಗಳ ಅನನ್ಯ ಹೆಣಿಗೆ – **ಡಾ. ಅಶ್ವಿನಿ ಆರ್.ಎಸ್.** / ೧೭
೬. ಪಶ್ಯದ ಜೈವಿಕ ನೆಲೆ ಹಾಗೂ ಸಾಮಾಜಿಕ ಅರ್ಥ – **ಪ್ರಕಾಶ್ ಮಂಟೇದ** / ೨೯
೭. ಕನ್ನಡ ಸಿನಿಮಾ ಮತ್ತು ಪರಿಸರ ಪ್ರಜ್ಞೆ – **ಪ್ರೊ.ಎಂ.ಚಂದ್ರಕಲಾ** / ೩೪
೮. ಮಹಿಳಾ ಬಂಡಾಯ ಚಳುವಳಿ– ಸಮಕಾಲೀನ ಸವಾಲುಗಳು
– **ಶೋಭಾರಾಣಿ ಎನ್.** / ೩೯
೯. ಶ್ರೀಯವರ ಪಾರಸಿಕರು ನಾಟಕದ ವಸ್ತು ವಿಶ್ಲೇಷಣೆ – **ತಾರಾಮಣಿ ಆರ್.** / ೪೩
೧೦. ಬದುಕು ಕಾದಂಬರಿ: ಸ್ತ್ರೀ ಪಾತ್ರಗಳ ಹಿನ್ನೆಲೆಯಲ್ಲಿ ಸಮಗ್ರ ಗ್ರಹಿಕೆಗಳು ಮತ್ತು ಅವಲೋಕನ – **ಡಾ.ಎಸ್.ಶಶಿರೇಖಾ** / ೫೦
೧೧. ನಾನು ಹಿರಿಯವ ನಾ (Am I the senior) ? – **ಡಾ.ಸತೀಶ್ ಎಲ್.ಎ.** / ೬೦
೧೨. ಕುವೆಂಪು ಅವರ 'ಜಲಗಾರ' ನಾಟಕ: ಅದ್ವೈತ ತತ್ವ– **ಡಾ.ಚೈತಾಲಿ ಕೆ.ಎಸ್.** / ೬೯
೧೩. ರಂಗಭೂಮಿ ಮತ್ತು ಚಲನಚಿತ್ರ – **ಎಂ. ಆರ್. ಲೋಕೇಶ್** / ೭೪
೧೪. ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಕುರಿತ ಒಂದು ಅವಲೋಕನ
– **ಡಾ.ಪುಟ್ಟೇಶ ಸಿ. ಮತ್ತು ಡಾ.ಯು.ಬಿ.ರಾಯ್** / ೮೦
೧೫. ಕೊರೊನಾದೊಂದಿಗಿನ ಬದುಕು ಆಮಯಮಯ
– **ಈಶ್ವರಯ್ಯ ಜಿ.ಸಿ. ಮತ್ತು ಡಾ. ಸತೀಶ್ ಎಲ್.ಎ.** / ೮೪
೧೬. ಸಿರಿಸಂಪಿಗೆ ಪಾತ್ರದ ಅನನ್ಯತೆ – **ಡಾ. ಗಿರಿಜಾಂಬಾ ಕೆ.ಎನ್.** / ೮೯
೧೭. ಗುಳ್ಳವ್ವ – **ನಾಗವರ್ಮ.ಜಿ.ಎಚ್.** / ೯೨
೧೮. ಹೊಸಗನ್ನಡ ಕಾವ್ಯಗಳಲ್ಲಿ ಗಾಂಧಿ ಚಿತ್ರಣ – **ಮುನಿರಾಜು ಕೆ.** / ೧೦೦
೧೯. ಅಂಬಿಗರ ಚೌಡಯ್ಯನ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ– **ಸಿದ್ದೇಗೌಡ ಎಸ್.**/ ೧೦೫
೨೦. ಬೆಂಗಳೂರು ಪರಿಸರದ ಜಾತ್ರೆಗಳಲ್ಲಿನ ಬಲಿ ಮತ್ತು ಗಾವಿನ ಆಚರಣೆಗಳು: ಒಂದು ವೈಜ್ಞಾನಿಕ ವಿಶ್ಲೇಷಣೆ – **ಡಾ.ಡಿ.ಶಿವಸ್ವಾಮಿ** / ೧೧೧
೨೧. ಹೊಸ ಬೋಧನಾ ವಿಧಾನದ ಅವಶ್ಯಕತೆ: ಆನ್ ಲೈನ್ ತರಗತಿಗಳು ಬದಲಿ ವ್ಯವಸ್ಥೆಯೆ? – **ಡಾ.ಎಸ್.ಶಂಕರ್ ಮತ್ತು ಡಾ. ಸತೀಶ್ ಎಲ್.ಎ.** / ೧೨೦
೨೨. ಸಂದೇಶ ಸಂವಹನೆ: ಕ್ರಾಂತಿಕಾರಕ ಬದಲಾವಣೆಗಳು
– **ಡಾ.ಎಂ.ವಿ.ಶ್ರೀನಿವಾಸಲು ಮತ್ತು ಡಾ. ಸತೀಶ್ ಎಲ್.ಎ.** / ೧೨೪
೨೩. ಕುವೆಂಪು ಮತ್ತು ವಿಶ್ವ ಮಾನವತೆ – **ಶ್ರೀ ವಿಜಯ** / ೧೨೮
೨೪. ಭಾರತದಲ್ಲಿ ಶಕ್ತಿ ಆರಾಧನೆ – **ಡಾ.ಎ.ಆರ್.ಮಹೇಂದ್ರ** / ೧೩೮
೨೫. ಕನ್ನಡ ಸಾಹಿತ್ಯದಲ್ಲಿ: ರೈತಾಪಿ ಪರಿಕರಗಳು – **ಅಂಜಿನಪ್ಪ ಡಿ.** / ೧೪೩
೨೬. ರಾಷ್ಟ್ರೀಯತೆಯ ಪರಿಕಲ್ಪನೆ : ಕುವೆಂಪು ನಾಟಕಗಳು
– **ಡಾ. ವಿಜಯಕುಮಾರ್ ಹೆಚ್.ಜಿ.** / ೧೪೯

# ಕನ್ನಡ ಸಾಹಿತ್ಯದಲ್ಲಿ: ರೈತಾಪಿ ಪರಿಕರಗಳು

ಅಂಜಿನಪ್ಪ ಡಿ

ಕನ್ನಡ ಸಾಹಿತ್ಯಕ್ಕೆ ೨೫೦೦ ಸಾವಿರ ವರ್ಷಗಳ ಇತಿಹಾಸವಿದೆ. ಈ ಅವಧಿಯೊಳಗೆ ಹಲವು ಕಾಲಘಟ್ಟಗಳು ಬಂದುಹೋಗಿವೆ. ಸಾವಿರಾರು ಕವಿವರ್ಯರು ವಿವಿಧ ಪ್ರಕಾರದ ಸಾಹಿತ್ಯ ರೂಪಗಳನ್ನು ಸೃಷ್ಟಿಸಿದ್ದಾರೆ. ಸಾಹಿತ್ಯಕ್ಕೆ ಮೂಲವೆನ್ನುವ ಜನಪದ ಸಾಹಿತ್ಯದಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ, ರೈತರಿಗೆ ಸಂಬಂಧಿಸಿದ ಅಗ್ರ ಮಾಹಿತಿಯೇದೊರಕುತ್ತದೆ. ಆರಂಭದಿಂದಲೂ ಜನಪದರ ಸಂಬಂಧ ವ್ಯವಸಾಯದೊಂದಿಗೆ ಗಟ್ಟಿಗೊಂಡಿದೆ. ಇದರೊಟ್ಟಿಗೆ ಬದುಕುವುದರಿಂದ ಕೃಷಿಯ ಮಾಹಿತಿಯನ್ನು ತಮ್ಮ ಆಡು ಸಾಹಿತ್ಯದಲ್ಲಿ ಎಣೆಯತೊಡಗಿದರು. ರಂಟೆ, ಕುಂಟೆ, ನೆಗಿಲು, ಖೂರ್ಗಿ, ಕುಡ, ಕುಳ, ಈಚು, ನೊಗ, ಕವಿಗೋಲು, ಬಾರಿಕೋಲು, ಪಟಗಾಣಿ, ಮಿಣಿ, ಕುರ್ಚಿಗಿ, ಕುಡಗೋಲು, ಮಸಗಲ್ಲು, ಗೆಜ್ಜೆ, ಮುಗದಾಣ, ಕೊಡಣಸು, ಜೂಲ, ಮುರ, ಭೂಮಿ, ಮಳೆ, ಹೊಲ ಹದಗೊಳಿಸುವುದು, ಬಿತ್ತುವುದು, ಎಡೆ ಹರಗುವುದು, ಕಳೆಕೀಳುವುದು, ಕೊಯ್ಯಯವುದು, ಒಕ್ಕಲು ಮಾಡುವುದು, ತೂರುವುದು, ರಾಸಿ ಮಾಡುವುದು, ಹೀಗೆ ಹಲವು ಕೃಷಿಗೆ ಸಂಬಂಧಿಸಿದಂತೆ ಅನೇಕ ಪರಿಕರಗಳು ಬಳಕೆಯಾಗಿ ಜನಪದರ ಸಂಬಂಧ ಬಿಡಿಸಲಾರದ ಬಂಧವಾಗಿದೆ.

ಹಲಸಂಗಿ ಗೆಳೆಯರು ಸಂಪಾದಿಸಿದ 'ಗರತಿ ಹಾಡು' ಎಂಬ ಕೃತಿಯು ಸಂಬಂಧಗಳು ಮತ್ತು ಭೂತಾಯಿಯ ಮಹತ್ವ, ಕೃಷಿಯ ಬದುಕನ್ನು ಸ್ಮರಿಸಿಕೊಳ್ಳುವುದನ್ನು ರೊಟ್ಟಿಗೆ ಜನಪದರು ಗಾದೆ, ಒಗಟು, ವಡಪುಗಳಲ್ಲಿ ಕೃಷಿಗೆ ಸಂಬಂಧಿಸಿದ ಮಾಹಿತಿಯ ಆಗರವನ್ನೇ ಬೆಸೆದಿದ್ದಾರೆ. ಜನಪದರು ಕೃಷಿ ಕ್ಷೇತ್ರವನ್ನು ಹದಗೊಳಿಸುತ್ತಾರೆ: ಹಾಡಾಗಿ ಹಾಡುತ್ತಾರೆ, ಕಥೆಯಾಗಿ ಹೇಳುತ್ತಾರೆ ಅದು ಹೇಗೆಂದರೆ...

'ಏಳುತಲೆ ಎದ್ದುಯಾರ್ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು,'!

ಎಂದು ಭೂಮಿ ತಾಯಿಯನ್ನು ಸ್ಮರಿಸುತ್ತಾರೆ. ಜನಪದರಿಗೆ ದೇವರಿಗಿಂತ ಭೂಮಿತಾಯಿ ಶ್ರೇಷ್ಠ. ಅಂತಹ ಶ್ರೇಷ್ಠ ದೇವತೆಯನ್ನು ಅವರು ನಿತ್ಯ ಸ್ಮರಿಸುವುದು ನಾವು ಕಾಣುತ್ತೇವೆ. ಇದಕ್ಕೆ ಕಾರಣ ಮನುಷ್ಯನ ಹುಟ್ಟಿಗೂ ಸಾವಿಗೂ ಭೂಮಿಯೆ ಕಾರಣವಾಗುತ್ತದೆ. ನಡುವೆ ಜೀವನಕ್ಕೆ ಅನ್ನಕೊಡುವುದೀಮಣ್ಣು. ಜಗತ್ತಿನಲ್ಲಿ ಈ

ಇಂತಹ ಕೃಷಿ ಕ್ಷೇತ್ರವನ್ನು ವಚನಕಾರರುತಮ್ಮ ವಚನಗಳಲ್ಲಿ ಹದಗೊಳಿ ಬಿತ್ತಿ, ಬೆಳೆದು ಕೊಯ್ಯುವ ಪ್ರಯತ್ನ ಮಾಡಿದ್ದಾರೆ. ವಚನಸಾಹಿತ್ಯದಲ್ಲಿ ಅಂತರಂಗದ ಕೃಷಿ ಮತ್ತು ಬಹಿರಂಗ ಕೃಷಿ ಇವೆರಡನ್ನು ವಚನಕಾರರು ಮಾಡಿರುತ್ತಾರೆ. ಬೆಳೆಗೆ ಭೂಮಿಯನ್ನು ಹೇಗೆ ಹದಗೊಳಿಸಬೇಕೋ ಹಾಗೆ ಉತ್ತಮ ಮನುಷ್ಯನಾಗಬೇಕಾರೆ ಮನಸ್ಸನ್ನು ಹದಗೊಳಿಸಬೇಕು ಎನ್ನುತ್ತಾರೆ.

ವಚನ ಸಾಹಿತ್ಯದ ಆದ್ಯ ವಚನಕಾರ ಜೇಡರ ದಾಸಿಮಯ್ಯ ಭೂಮಿಯನ್ನು ಕುರಿತು ಅಗಾಧವಾಗಿ ಸ್ಮರಿಕೊಳ್ಳುವುನ್ನು  ಕಾಣುತ್ತೇವೆ.

"ಇಳೆ ನಿಮ್ಮದಾನ ಬೆಳೆ ನಿಮ್ಮದಾನ
ಸುಳಿದು ಸೂಸುವ ಗಾಳಿ ನಿಮ್ಮದಾನ
ಎತ್ತು ನಿಮ್ಮದಾನ. ಬಿತ್ತು ನಿಮ್ಮದಾನ
ಸುತ್ತಿ ಹರಿಯುವ ಸಾಗರವೆಲ್ಲ ನಿಮ್ಮದಾನ
ನಿಮ್ಮದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ"

ಹೀಗೆ ರಾಮನಾಥ ಮಾನವ ಪ್ರಕೃತಿಯೊಂದಿಗೆ ಹೇಗೆ ಸಂಬಂಧಕಟ್ಟಿಕೊಂಡಿದ್ದಾನೆ ಎನ್ನುವುದನ್ನು ಈ ವಚನದಲ್ಲಿ ಹೇಳುವ ಪ್ರಯತ್ನವನ್ನು ಮಾಡಿದ್ದಾರೆ. ಈ ಭೂಮಿ, ಗಾಳಿ, ಬೆಳೆ, ಎತ್ತು, ನಿಸರ್ಗ ಎಲ್ಲವೂ ದೇವರ ಸೃಷ್ಟಿ. ಇದೆಲ್ಲವನ್ನೂ ಮಾನವ ತನ್ನ ಉಪಭೋಗಕ್ಕೆ ಬಳಸಿಕೊಂಡಿದ್ದಾನೆ. ೮೪ ಲಕ್ಷ ಜೀವರಾಶಿಗಳಲ್ಲಿ ಮನುಷ್ಯ ತುಂಬಾ ಬುದ್ಧಿವಂತ. ಈ ಕಾರಣದಿಂದಲೇ ಈ ಸೃಷ್ಟಿಯನ್ನು ತನ್ನ ಅನುಭವಕ್ಕೆ ಬಳಸಿಕೊಂಡಿದ್ದಾನೆ. ದೇವರು ಕೊಟ್ಟ ನಿಸರ್ಗವನ್ನು, ಪರಿಸರವನ್ನು ಮತ್ತು ಅದರಿಂದ ಬರುವಂತಹ ಉಪಯೋಗವನ್ನು ಪಡೆದುಕೊಂಡು, ದೇವರನ್ನು ಸ್ಮರಿಸುವುದು ಬಿಟ್ಟು ಅನ್ಯರನ್ನು ಸ್ಮರಿಸುವವರನ್ನು ದೇವರದಾಸಿಮಯ್ಯ ನಾಯಿಗಳಿಗೆ ಹೋಲಿಕೆ ಮಾಡಿತ್ತಾನೆ.

ಬಸವಣ್ಣತನ್ನ ವಚನವೊಂದರಲ್ಲಿ
"ಕೃಷಿ ಕೃತ್ಯಾವಕಾಯಕದಿಂದಾದೊಡೇನು?
ತನು ಮನ ಬಳಸಿ ಗಳಿಸಿ ತಂದು
ಗುರು–ಲಿಂಗ–ಜಂಗಮಕ್ಕೆವೆಚ್ಚಿಸಿ
ದಾಸೋಹವ ಮಾಡುವ ಪರಮ ಸದ್ಭಕ್ತನ
ಪಾದವತೋರಯ್ಯ ಎನಗೆ" ಎಂದು ಹೇಳುತ್ತಾರೆ.

ಕೃಷಿ ಮಾಡುವಾತನ ಮನ ಶುದ್ದ, ತನು ಶುದ್ಧಆತನ ನಡೆ ಶುದ್ದ, ನುಡಿಯೆಲ್ಲ ಪಾವನವು ಆತನಿಗೆ ಉಪದೇಶಿಸುವ ಮಾಡುವವನೇ ಪರಮ ಸದ್ಗುರುಅಂತಪ್ಪ ಸದ್ಭಕ್ತನ ಮನೆಯಕೈಲಾಸವೆಂದು ಹೊಕ್ಕು .." ಎಂದೇಳುವ ಮೂಲಕ ಉಳುಮೆ ಮಾಡುವ ಸದ್ಭಕ್ತನ ಮನಸ್ಸೇಕೈಲಾಸವೆಂದು ಹೇಳುತ್ತಾರೆ.

"ತನುವತೋಂಟವ ಮಾಡಿ ಮನವ ಗುದ್ದಲಿಯ ಮಾಡಿ
ಅಗಿದ್ದು ಕಳೆದೆನೆಯ್ಯಾ ಭ್ರಾತೀನ ಬೇರ



ಮಣ್ಣನ್ನೆ ನಂಬಿ ಅದೇಷ್ಟೊ ಜೀವಗಳು ಬದುಕುಕಟ್ಟಿಕೊಂಡು, ಮಣ್ಣಿನಲ್ಲಿ ಮೈಮುರಿದು ದುಡಿದು ಮಣ್ಣಲ್ಲಿ ಮಣ್ಣಾಗುತ್ತಿದ್ದಾರೆ.

ವ್ಯವಸಾಯಕ್ಕೆ, ಒಕ್ಕಲುತನಕ್ಕೆ, ಕೃಷಿಗೆ ಎತ್ತುಗಳು ಬಹಳ ಮುಖ್ಯ ಎತ್ತುಗಳನ್ನು ಜನಪದರು ಬಸವಣ್ಣನೆಂದೇ ಅಂದುಕೊಂಡಿದ್ದಾರೆ. ಅವರ ಪ್ರಕಾರ ಬಸವಣ್ಣ ಶಿವನ ರೂಪ. ಶಿವನೆಂದರೆ ಬಸವ. ಬಸವನೆಂದರೆ ಬಸಬಣ್ಣ, ಶಿವನ ವಾಹನ. ಆದ್ದರಿಂದ ಬಸವನನ್ನು ರೈತರು ಆರಾಧಿಸುವುದನ್ನು ಕಾಣುತ್ತೇವೆ. ಬಸವನನ್ನು ಆರಾಧಿಸುವುದರಿಂದ ರೈತರು ಸೋಮವಾರದ ದಿವಸವನ್ನು ಆತನಿಗೋಸ್ಕರ ಮೀಸಲಿಟ್ಟಿದ್ದಾರೆ. ಆದ್ದರಿಂದ ಈ ದಿನ ಗಳೆ ಹೂಡುವುದಿಲ್ಲ. ಎತ್ತುಗಳನ್ನು ಮೈತೊಳೆದು ಮನೆಯಲ್ಲೇ ಮೇಯುಸುತ್ತಾರೆ. ಬಸವಣ್ಣನನ್ನು ನಂಬಿದವರಿಗೆ ಎಂದಿಗೂ ಮೋಸವಿಲ್ಲ. ಕಾರುಣಿಮೆಯ ದಿವಸ, ಮಣ್ಣೆತ್ತಿನ ಅಮಾವಾಸ್ಯೆ ದಿನ ಎತ್ತುಗಳಿಗೆ ವಿಶೇಷವಾದ ಪೂಜೆ ಮಾಡುತ್ತಾರೆ. ಮನೆಯಲ್ಲಿ ಹೋಳಿಗೆ ಊಟ ಮಾಡಿ ಉಣ್ಣುತ್ತಾರೆ.

ರೈತನಿಗೆ ಕೃಷಿಯ ಸಾರ್ಥಕತೆ: ಅನ್ನ ಮತ್ತು ಹಣದ ರೂಪದಲ್ಲಿದೆ. 'ಮಾರುದ್ದ ಪೈರಾಗಲಿ ಮೊಳವುದ್ದ ತೆನಿಯಾಗಲಿ, ಬಡವನ ಮನಿಗೆ ಸಿರಿಬರಲಿ ಭೂಮಿ ತಾಯಿಕಂದಯ್ಯ' ರೈತನಿಗೆ ತಾನು ಉತ್ತಿ ಬಿತ್ತಿ ಬೆಳೆದು ಕೊಯ್ಲು ಮಾಡಿ ಕಣಕ್ಕೆ ತಂದು ಹೊಕ್ಕಿ ರಾಸಿ ಮಾಡಿ ಚೀಲದಲ್ಲಿ ತುಂಬಿ ಮನೆಗೆ ತಂದಾಲೆ ಸಾರ್ಥಕವಾಗುವುದು. ಇದರ ನಡುವೆ ಸಾಕಷ್ಟು ಏರುಪೇರುಗಳು ನಡೆದೊಗುತ್ತವೆ. ಮಳೆ ಸರಿಯಾಗಿ ಬರುವುದಿಲ್ಲ. ಬೆಳೆದ ಬೆಳೆಗೆ ಸರಿಯಾಗಿ ಬೆಂಬಲ ಬೆಲೆಸಿಗುವುದಿಲ್ಲ. ಬೆಲೆ ಸಿಗದೆ ಅದೆಷ್ಟೋ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಅನೇಕ ಪ್ರಕರಣಗಳು ನಮ್ಮಲ್ಲಿವೆ. ಜನಪದರ ನಂತರ ಪ್ರಾಚೀನ ಸಾಹಿತ್ಯದಲ್ಲೂ ಕೃಷಿಯನ್ನೇ ಪ್ರಧಾನವಾಗಿಟ್ಟುಕೊಂಡು ಚರ್ಚಿಸಿರುವ ಕೃತಿಗಳು ಬಂದಿವೆ.

ನಂತರದ ವಚನ ಸಾಹಿತ್ಯದಲ್ಲಿ ಮತ್ತುದಾಸ ಸಾಹಿತ್ಯ ತತ್ವಪದಗಳಲ್ಲಿ ಇದರ ಬಗ್ಗೆ ಸಾಕಷ್ಟು ಮಾಹಿತಿ ಬಂದಿದೆ. ವಚನ ಸಾಹಿತ್ಯ ೧೨ ಶತಮಾನದಲ್ಲಿ ಉಗಮ ಗೊಂಡಿದೆ. ಇಲ್ಲಿಯ ವಚನಕಾರರು ಕೃಷಿಮೂಲ: ನೆಲಮೂಲ, ಶ್ರಮಮೂಲ ಸಂಸ್ಕೃತಿಯ ಮೂಲಕವೇ ಬಂದವರಾಗಿದ್ದಾರೆ. ಇದುಜಗತ್ತಿನ ಶ್ರೇಷ್ಠ ಸಾಹಿತ್ಯವೂ ಕೂಡ. ಕೃಷಿ ಅನಾದಿಕಾಲದಿಂದಲೂ ಬಂದಿರುವ ಕಾಯಕವಾಗಿದೆ. ಕೃಷಿಗೆ ರೈತನೇ ಮಿತ್ರ, ಇವನಿಂದಲೇ ಸಾಗಿದೆ ಪ್ರಪಂಚರಥ. ಜಗತ್ತಿನಜನ ಬದುಕಿರುವುದೇ ಈತನ ಶ್ರಮದಿಂದ. ಅನ್ನವಿಲ್ಲವೆಂದರೆ ಜೀವವಿಲ್ಲ. ಜೀವ ಇಲ್ಲವೆಂದರೆ ಜೀವನವಿಲ್ಲ. ಆದ್ದರಿಂದಲೇ ರೈತನನ್ನು ದೇಶದ ಬೆನ್ನೆಲುಬುಯೆಂದು ಕರೆದಿರುವುದು. ಎಲ್ಲಿ ಕೃಷಿ ಶ್ರೀಮಂತವಾಗಿರುತ್ತದೋ ಅಲ್ಲಿ ನಾಡು ಸುಭಿಕ್ಷತೆಯಿಂದ ಕೂಡಿದ ವಾತಾವರಣವಿರುತ್ತದೆ. ಇದಕ್ಕಾಗಿಯೇ 'ಕೃಷಿ ತೋ ನಾಸ್ತಿ ದುರ್ಭಿಕ್ಷಂ' ಎಂದು ಕರೆದಿರುವುದು. ಪ್ರಪಂಚದ ಎಲ್ಲಾ ವಿದ್ಯೆಗಳಿಗಿಂತ ಕೃಷಿ ವಿದ್ಯಾ ಶ್ರೇಷ್ಠ. ಬಹುತೇಕರು ಕೃಷಿಯನ್ನೇ ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ದೊರೆತಿದೆ. ಎಲ್ಲಾ ಉದ್ಯಮಗಳಿಗಿಂತ ಕೃಷಿ ಕಾಯಕ ಶ್ರೇಷ್ಠ.

ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳಮಾಡಿಕೊಂಡು
ಸುಷುಮ್ನನಾಳದಿಂದ ಉದಕವತಿದ್ದಿ ಬಸಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆ ಎಂಬ ಬೇಲಿಯನಿಕ್ಕಿ ಆವಾಗಳೂ
ಈ ತೋಟದಲ್ಲಿಜಾಗರವಿದ್ದು ಸಸಿಯ ಸಲಹೀದೆನುಕಾಣಾಗುಹೇಶ್ವರ"

ಇಲ್ಲಿ ಅಲ್ಲಮಪ್ರಭು ಮನಸ್ಸಿನ ಭೂಮಿಯನ್ನು ಹದಗೊಳಸುವ ವಿಧಾನವನ್ನು ಹೇಳುತ್ತಾರೆ. ಸೃಷ್ಟಿಯ ಎಲ್ಲವೂ ಬಯಲಿನ ಬೆಳೆಯಾಗಿದೆ. 'ಬಯಲೆಂಬ ಒಕ್ಕಲಿಗನು ಬಯಲೆಂಬ ಭೂಮಿಯಲ್ಲಿ ಬಯಲೆಂಬ ಬೀಜವ ಬಿತ್ತಿ ಬಯಲಿನ ಬೆಳೆಯಾದ ಈ ಸಚರಾಚರವನ್ನೆಲ್ಲ ತಲೆದೋರಿಸಿ ಮತ್ತೆ ಅದು ಬಯಲಾಗಿ ಬಯಲಿನಲ್ಲಿಯೇ ಸೇರಿಕೊಳ್ಳುವ ಪರಿಯನ್ನು ಅಲ್ಲಮಪ್ರಭು ಈ ವಚನದಲ್ಲಿ ತಿಳಿಸುತ್ತಾರೆ. ಭೂಮಿಯಲ್ಲಿ ಬೀಜ ಬಿತ್ತಿ ಬೆಳೆದು ಅಧನ್ನ ಕೊಯ್ದು ಒಕ್ಕುವ ಪರಿಯನ್ನು ತನ್ನ ವಚನದಲ್ಲಿ ಚಿತ್ರಿಸಿದ್ದಾನೆ. ತೋಟ ಮಾಡಬೇಕಾದರೆ ಅದಕ್ಕೆ ಬೇಕಾದ ಜಾಗರುಕತೆ ಬೇಕು. ಕೃಷಿಯ ಪರಿಕರಗಳಿಂದ ಭೂಮಿಯನ್ನು ಅಗಿಯಬೇಕು. ಅಗಿಯುವಾಗ ಹೆಂಡೆಗಳು ಬರುತ್ತವೆ. ಅವುಗಳನ್ನು ಒಡೆದು ಪುಡಿ ಮಾಡಿ. ಹದಮಾಡಬೇಕು. ಅಂತಹ ಹೊಲದಲ್ಲಿ ಬೀಜ ಬಿತ್ತಬೇಕು ಬಿತ್ತಿದ ಬೀಜಕ್ಕೆ. ನೀರು ಅವಶ್ಯಕ. ಅದಕ್ಕಾಗಿ ಬಾವಿತೊಡಿಸಬೇಕು. ನೀರು ಹಾಯಿಸಬೇಕು ಮತ್ತು ಆ ತೋಟಕ್ಕೆ ಬೇಲಿ ಬೇಕು. ಸುತ್ತ ಬೇಲಿಯನ್ನು ಹಾಕಿಕೊಂಡು, ಕಳ್ಳಕಾಕರಿಂದ ಮಂಗಗಳಿಂದ, ಪಕ್ಷಿಗಳಿಂದ ರಕ್ಷಿಸಿಕೊಳ್ಳಲು ಹಗಲಿರುಳು ಶ್ರಮಿಸಬೇಕು ಮತ್ತು ದೇಹವೆಂಬ ಭೂಮಿಯಲ್ಲಿ ಪಂಚೇಂದ್ರಿಯಗಳು, ಅರಿಷಡ್ವರ್ಗಗಳು ತಲ್ಲಣಗಳನ್ನುಂಟುಸುತ್ತವೆ. ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಮತ್ತು ರಕ್ಷಿಸಿಕೊಳ್ಳಲು ಅಂತರಂಗ ಮತ್ತು ಬಹಿರಂಗ ಭೂಮಿಗೆ ಬೇಲಿ ಅವಶ್ಯ. ಅದನ್ನು ಹದಗೊಳಿಸಿ ಉತ್ತಮೊತ್ತಮ ಬೆಳೆಗಳನ್ನು ಬೆಳೆಯಬೇಕೆಂಬ ಪ್ರಕ್ರಿಯೆಯನ್ನು ಅಲ್ಲಮಪ್ರಭು ತನ್ನ ವಚನದಲ್ಲಿ ಕೇಳುವಂತದ್ದನ್ನು ಕಾಣುತ್ತೇವೆ.

ಇನ್ನುಅಕ್ಕಮಹಾದೇವಿ ಪ್ರಕೃತಿಯ ವಿಸ್ಮಯಕ್ಕೆ ಬೆರಗಾಗಿಅದರಚಮತ್ಕಾರದ ಬಗ್ಗೆ ಉಬ್ಬೇರಿಸುತ್ತಾಳೆ.

'ಈಳೆ ನಿಂಬೆ, ಮಾವು, ಮಾದಲಕ್ಕೆ ಹುಳಿನೀರೆರೆದವರಾರಯ್ಯ?
ಕಬ್ಬು, ಬಾಳೆ, ಹಲಸು, ನಾಳಿವಾಳಕ್ಕೆ ಸಿಹಿನೀರೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆಓಗರದ
ಉದಕವನೆರೆದವರಾರಯ್ಯ? ಪರಿಮಳದುದಕವನೆರೆದವರಾರಯ್ಯ
ಇಚಿತಿ ಜಲ ಒಂದೆ, ನೆಲ ಒಂದೆ, ಆಕಾಶವೂ ಒಚಿದೆ,
ಜಲವು ಹಲವು ದ್ರವ್ಯಂಗಳ ಕೂಡಿತನ್ನ ಪರಿ
ಬೇರಗಿಹ ಹಾಗೆ ಎನ್ನದೇವಚೆನ್ನಮಲ್ಲಿಕಾರ್ಜುನಯ್ಯನು ಹಲವು
ಜಗಂಗಳ ಕೂಡಿಕೊಂಡಿದರೇನು? ತನ್ನ ಪರಿ ಬೇರೆ'

ಎಂದು ಭೂಮಿಯಲ್ಲಿ ಬೆಳೆದ ಬೆಳೆಗಳೊಳಗಿನ ನಿಗೂಢತೆಯನ್ನು



ಹುಡುಕುತ್ತಾಳೆ. ಭೂಮಿ ಸಂಪತ್ತಿನ ಆಗರ, ಅದರೊಳಗಿನ ಅದಮ್ಯತೆ ನಮಗೆ ಕಾಣುವುದಿಲ್ಲ. ಅದನ್ನೆ 'ನೆಲದ ಮರೆಂಯ ನಿಧಾನದಂತೆ, ಫಲದ ಮರೆಂಯರುಚಿಯಂತೆ, ಶಿಲೆಯ ಮರೆಯ ಹೇಮದಂತೆ, ತಿಲಮರದ ಮರೆಯತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ' ಎಂದು ಭೂಮಿಯ ಚಮತ್ಕಾರದ ಬಗ್ಗೆ ಸೋಜಿಗವನ್ನು ವ್ಯಕ್ತಪಡಿಸುತ್ತಾಳೆ.

ಹಡಪದ ಅಪ್ಪಣ್ಣ 'ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ ವಿಷಯ ಸುಖಂಗಳಿಗೆ ಹುಸಿಯನೆ ನುಡಿದು ಗಸಣಿಗೊಳಗಾಗುವ ಮನುಜರೆತ್ತಬಲ್ಲರೊ ಬಸವಪ್ರಿಯ'

ಅಪ್ಪಣ್ಣ ಹಸನ, ಹರಗು, ಕಸ, ಬಿತ್ತು ಮುಂತಾದ ಪದಗಳನ್ನು ಬಳಸುತ್ತಾನೆ. ಅಂದಿನ ವಚನಗಾರರಿಗೆ ಬಹುತೇಕ ವ್ಯವಸಾಯದ ಬಗ್ಗೆ ಅನುಭವವಿತ್ತು. ಮನಸ್ಸನ್ನು ಹೊಲಕ್ಕೆ ಪರ್ಯಾಯ ರೂಪಕವಾಗಿ ನೋಡುವ ಪ್ರಯತ್ನ ನಡೆಯಿತು. ೧೨ನೇ ಶತಮಾನದ ಕಾಲದಲ್ಲಿ. ಬಿಜ್ಜಳ ರಾಜ ರಾಜ್ಯವಾಳುತ್ತಿದ್ದನು. ಆತನರಾಜ್ಯದಲ್ಲಿ ಉಗ್ರಾಣಗಳು ಇರುತ್ತಿದ್ದವು. ಉಗ್ರಾಣದಲ್ಲಿ ನವಧಾನ್ಯಗಳಾದ ಜೋಳ ,ಗೋಧಿ, ಕಡಲೆ, ಹೆಸರು, ನವಣೆ, ಬರಗು, ಸಾವೆ, ಮತ್ತು ಹಾರಕಗಳು ಇರುತ್ತಿದ್ದವು. ಹೊಸ ಜೋಳ ೬೦ಲಕ್ಷ ಖಂಡುಗ, ಶಾಲಿ ಧಾನ್ಯ ೩೦ ಲಕ್ಷಖಂಡುಗ, ಹೆಸರು ೩೬ ಖಂಡುಗ, ಗೋಧಿ ೧೨ಲಕ್ಷ ಖಂಡುಗ, ನಾವಣೆಹಾರಕ, ಸಾವೆ, ಬರಗು, ದೂಸಿಗಳೆಂಬ ಧಾನ್ಯಗಳು ೫೦ಲಕ್ಷ ಖಂಡುಗ, ಕಾಳುಗಳು ಉಗ್ರಾಣದಲ್ಲಿ ಇರುತ್ತಿದ್ದವು.

ಬೆಳೆಗಳು ಹಸನಾಗಿ ಬರಬೇಕೆಂದರೆ ಬೇಡವಾದ ಕಳಸಗಳನ್ನು ಕೀಳಬೇಕು. ಇಲ್ಲವೆಂದರೆ ಅವುಗಳು ಬೆಳೆಗಳಿಗೆ ಕಂಟಕವಾಗಿ ಕಾಡುತ್ತಾ ಅವುಗಳನ್ನು ನಾಶ ಮಾಡುತ್ತವೆ ಎಂದು ಬಸವಣ್ಣ ಹೇಳುತ್ತಾರೆ.

'ಬೆಳೆವ ಭೂಮಿಯಲ್ಲಿ ಪ್ರಳಯದ ಕಸ ಹುಟ್ಟಿ, ತಿಳಿಯಲೇಯದು ಎಚ್ಚರವಲೀಯದು' ಎಂದು ಕಳೆ ಕಸಗಳ ಪ್ರಸ್ತಾಪವನ್ನು ಮಾಡುತ್ತಾರೆ.

ಹೊಲ, ನೇಗಿಲು, ಎತ್ತು, ಗಳೆ, ಬಿತ್ತು, ಹದ, ಬೆದೆ, ಖೂರಿಗೆ, ದಿಂಡು, ತಾಳು, ಕೋಲು, ಸೆಡ್ಡಿ, ಬೀಜ, ಮಳೆ, ಸಸಿ, ಕಳೆ, ಸೆದೆ, ಅಲಬು, ಕೊಯ್ಲು, ಕುಡುಗೋಲು, ಹಿಡಿ, ಗೂಡು, ಬಣವೆ, ತೆನೆ, ಖಂಡಿ, ಒಕ್ಕು, ಹೊಟ್ಟು, ರಾಶಿ, ಕುರ್ಜಗಿ, ಚಲಿಕೆ, ಹಾರೆ, ಪುಟ್ಟಿ, ಉಡಿ, ಕಲಸು, ಬೆರೆಸು, ಬಿಡಿಸು, ಸಾಲು ಈ ಮುಂತಾದ ಭಾಷೆಗಳನ್ನು, ಪದಗಳನ್ನು ವಚನಕಾರರು, ಆ ದಿನಗಳಲ್ಲಿ ಸಮರ್ಥವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು.

ಮುದ್ದಯ್ಯನೆಂಬ ವಚನಕಾರನು ತನ್ನ ವಚನದಲ್ಲಿ ಈ ರೀತಿಯ ಪ್ರಸ್ತಾಪವನ್ನು ಮಾಡುತ್ತಾನೆ. "ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲ ಹಿಡಿದು ಅಂತಃಕರಣಚತುಷ್ಟಯ ಎಂಬ ಪಶುವ ಕಟ್ಟಿ, ಆ ಹೊಲನಂ ಹಸಮಾಡಿ ಬಿತ್ತುವ ಪರಿಇನ್ನಾವುದಯ್ಯಾ, ಎಂದೊಡೆ ನಾದ ಬಿಂದು ಕಲೆ ಮಳೆಗಾಲದ ಹದ ಬೆದೆಯುನರಿದು ಸ್ಥೂಲವೆಂಬ ದಿಂಡಿಗೆತ್ರಿದೇವನೆಂಬ ತಾಳ ನೆಟ್ಟುಈಡ ಪಿಂಗಳ ಸುಷುಮ್ನ ನಾಳವೆಂಬ ಕೊಳವೆಗಳ ಚೋಧಿಸಿ ಮೇಲೆ ತ್ರಿಕೂಟ ಸ್ಥಾನವೆಂಬ

ಹಗ್ಗವಂ ಸೇದಿ ಕಟ್ಟಿ ಹಂಸನೆಂಬ ಎತ್ತ ಹೂಡಿ ಪ್ರಣವ ಎಂಬ ಬೀಜವ ಸರ್ವಶಾಂತಿ ಎಂಬ ಮೇಘ ಸುಳಿಯಲ್ಕೆ ನೀಲ ಬ್ರಹ್ಮವೆಂಬ ಸಸಿ ಹುಟ್ಟಿತ್ತು ಆ ಸಸಿಯ ಮುಟ್ಟುವ ಸಪ್ತವರ್ಣದ ಸದೆಯ ಕಳೆದು ಅಷ್ಟ ವರ್ಣದ ಅಲಬ ಕಿತ್ತುದಶವಾಯು ಎಂಬ ಕಸವಂ ಕಿತ್ತುತೆಗೆದು ಆ ಭತ್ತ ಬೆಳೆದು ನಿಂದಿರಲುಕೊಯ್ವುದೆಂಬ ಪರಿಇನ್ನಾವುದೆಂದರೆಇಷ್ಟ ವೆಂಬ ಹಸ್ತವಂ ಪಿಡಿದುಜನನದ ನಿಲುವು ಕೊಯ್ದು ಮರಣದ ಸಿವಡಂ ಕಟ್ಟಿ ಆಕಾಶವೆಂಬ ಬಣವೆಯ ನೊಟ್ಟಿಉಣ್ಮಣಿಯೆಂಬ ತೆನೆಯಂತರಿದು ಮನೋರಥವೆಂಬ ಬಂಡಿಯಲ್ಲಿ ಹೇರಿ ಒಡ್ಕ... ಪಾಪದ ಹೊಟ್ಟುತೂರಿ . ಯಮರಾಜನೆಂಬ ಅರಸನಿಗೆಕೋರನಿಕ್ಕದೆ . ಸುಖಿಯಾಗಿಪ್ಪ ಒಕ್ಕಲು ಮಗನ ತೋರಿ ಬದುಕಿಸಯ್ಯ ಕಾಮ ಬೀಮಾಜೀವದೊಡೆಯ ಪ್ರಭುವೇ ನಿಮ್ಮಧರ್ಮ ನಿಮ್ಮಧರ್ಮ" ಎಂದು ಭೂಮಿ ಮತ್ತು ಮನಸ್ಸನ್ನು ಹದಗೊಳಿಸುವ ಪರಿಯನ್ನು ಮುದ್ದಯ್ಯನೆಂಬ ವಚನಕಾರ ಹೇಳುತ್ತಾರೆ.

ಸರ್ವಜ್ಞನು ಉತ್ತೊಮ್ಮೆ ಹರಗದಲೇ ಬಿತ್ತೊಮ್ಮೆ ನೋಡದಲೇ ಹೊತ್ತೇರಿ ಹೊಲಕ್ಕೆ ಹೋದರೆ ಅವನ ನೆತ್ತರ ಸುಡುವ ಸರ್ವಜ್ಞ/ಸರ್ವಜ್ಞನು ರೈತರಾದವರು ಕೋಳಿ ಕೂಗುವ ಮೊದಲೇ ಎದ್ದು ಎತ್ತುಗಳ ಮುಖ ನೋಡುತ್ತಾರೆ. ಎತ್ತುಗಳಿಗೆ ಹೊಟ್ಟು, ಮೇವು ಹಾಕಿ ಹೊತ್ತೇರುವ ಮೊದಲೆ ಹೊಲಕ್ಕೆ ಹೋಗಿ ಹೊಲದಲ್ಲಿ ಅಡ್ಡಾಡಿ ಬರುತ್ತಾರೆ. ರೈತರಿಗೆ ಕೃಷಿಯೆ ಅವಿಭಾಜ್ಯ ಅಂಗವಾಗಿರುವುದರಿಂದ ಅದರ ಬಗ್ಗೆ ಕಾಳಜಿಯಿರಬೇಕು. ಸರ್ವಜ್ಞನು ಅನೇಕ ವಚನಗಳಲ್ಲಿ ರೈತ, ಹೊಲ, ಅದರ ಪರಿಕರಗಳ ಬಗ್ಗೆ ಪ್ರಸ್ತಾಪ ಮಾಡುತ್ತಾನೆ.

ಕುವೆಂಪು ಅವರ ಸಾಹಿತ್ಯ ಬಹುತೇಕ ರೈತರ, ಮಧ್ಯಮ ವರ್ಗದವರ ಬಗ್ಗೆ ಧ್ವನಿ ಎತ್ತುತ್ತದೆ. ಜಲಗಾರ, ಗೊಬ್ಬರ, ನೇಗಿಲ ಯೋಗಿ ಮುಂತಾದ ಕೃತಿಗಳಲ್ಲಿ ರೈತರ ಪರ ನಿಂತು ಗಟ್ಟಿಧ್ವನಿ ಎತ್ತಿದ್ದಾರೆ. ಆಧುನಿಕ ಕನ್ನಡದ ಬಹುತೇಕ ಕವಿಗಳು ರೈತರ ಕಷ್ಟಗಳಿಗೆ ಧ್ವನಿಯಾಗಿದ್ದಾರೆ.

'ಬಹುರೂಪಿ' ಶೀರ್ಷಿಕೆಯೇ ಹೇಳುವಂತೆ ಈ ಪುಸ್ತಕ ಬಹುಶಿಸ್ತೀಯ ಲೇಖನಗಳ ಸಂಗ್ರಹ. ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳ ಹಲವು ಅಧ್ಯಯನ ಕೇಂದ್ರಗಳಲ್ಲಿ ವಿವಿಧ ವಿಷಯಗಳನ್ನು ಬೋಧಿಸುತ್ತಿರುವ ಅಧ್ಯಾಪಕರು ಬೋಧನೆಯ ಜೊತೆಜೊತೆಗೆ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವುದರ ಪರಿಣಾಮವೇ ಇಲ್ಲಿನ ಬಹುಪಾಲು ಬರಹಗಳು.

ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಬರಹಗಳಿದ್ದರೂ ಮಾನವಿಕ ವಿಷಯಗಳ ಮೇಲೆ [illegible]ಲಾದ ಲೇಖನಗಳೇ ಇಲ್ಲಿ ಹೆಚ್ಚಿವೆ. ಬಹುಶಿಸ್ತೀಯ [illegible] ಕೃತಿಯೊಂದು ಕನ್ನಡದಲ್ಲಿ ಪ್ರಕಟಗೊಂಡರೆ ಹೀಗ[illegible]ಪ್ಪುದು ಸಹಜವೇ ಆಗಿದೆ.

ಇಂತಹ ಹಿನ್ನಡೆಯ ನಡುವೆಯೂ ಎಷ್ಟು ಸಾಧ್ಯವೋ ಅಷ್ಟೂ ವಿವಿಧ ಜ್ಞಾನಶಿಸ್ತುಗಳಿಗೆ ಸಂಬಂಧಿಸಿದ ಬರಹಗಳನ್ನು ಕನ್ನಡದಲ್ಲಿ ಬರೆಯಿಸಿ ಪ್ರಕಟಿಸುವ ನಮ್ಮ ಯೋಜನೆಯ ಫಲವಾಗಿ ಪ್ರಕಟಗೊಂಡಿದೆ ಈ ಬಹುರೂಪಿ.

ಇದನ್ನು ಆಗು ಮಾಡಲು ತಮ್ಮ ಬರಹ ನೀಡಿ ಸಹಕರಿಸಿರುವ ಎಲ್ಲಾ ಲೇಖಕರಿಗೂ; ಕಾಲೇಜು ಶಿಕ್ಷಣ ಇಲಾಖೆ ಅಡಿಯಲ್ಲಿನ ಕಾಲೇಜುಗಳಲ್ಲಿ ಸಂಶೋಧನೆಗೆ ಒತ್ತು ನೀಡುತ್ತಿರುವ ಎಲ್ಲಾ ಸಹೋದ್ಯೋಗಿ ಮಿತ್ರರಿಗೂ, ಪ್ರಾಂಶುಪಾಲರುಗಳಿಗೂ ಮತ್ತು ಇಲಾಖೆಯ ಮೇಲಧಿಕಾರಿಗಳೆಲ್ಲರಿಗೂ ನಮ್ಮ ಕೃತಜ್ಞತೆಗಳು.

–ಸಂಪಾದಕರು

ಅದಿತಿ
ಅ
ಪುಸ್ತಕ

ISBN 978-93-5408-109-5
9 789354 081095

# भक्ति साहित्य की प्रासंगिकता

प्रधान संपादक
डॉ. एस. टी. मेरवाडे
डॉ. एस. एस. तेरदाल
संपादक
डॉ. एस. जे. पवार
डॉ. एस. जे. जहागीरदार

सौम्य प्रकाशन, विजयपुर

# भक्ति साहित्य की प्रासंगिकता

प्रधान संपादक

डॉ. एस. टी. मेरवाडे

डॉ. एस. एस. तेरदाल

संपादक

डॉ. एस. जे. पवार

डॉ. एस. जे. जहागीरदार

सौम्य प्रकाशन

महाबलेश्वर कॉलनी, दर्गा रोड

विजयपुर-586 103 (कर्नाटक)

# BHAKTI SAHITYA KI PRASANGIKATA

ISBN 978-93-83813-51-3
Publisher : Soumya Prakashan
Mahabaleshawar Colony Darga Road
Vijayapur– 586 103 (Karnataka)
© Publisher
First Edition : 2020
Copies : 1000
Pages : xii + 312 = 324
Price : **Rs. 300/-**
Book Size : Demy 1/8
Paper Used : 70 G.S.M. N. S. Maplitho

## भक्ति साहित्य की प्रासंगिकता

प्रधान् संपादक : डॉ. एस. टी. मेरवाडे, डॉ. एस. एस. तेरदाल
संपादक : डॉ. एस. जे. पवार, डॉ. एस. जे. जहागीरदार

ISBN 978-93-83813-51-3
प्रकाशन : सौम्य प्रकाशन
महाबलेश्वर कॉलनी, दर्गा रोड
विजयपुर - 586 103 (कर्नाटक)
प्रथम मुद्रण : 2020
© प्रकाशक
प्रति : 1000
पृष्ट : xii + 312 = 324
मूल्य : **रु. 300/-**
बुक साईज : डेमी 1/8
पेपर : 70 जी.एस.एम. एन. एस. म्यापलिथो

मुद्रक :
**त्वरित मुद्रण आफसेट प्रिन्टर्स**
विठ्ठल मंदिर रोड, गदग - 582 101
Email : chaitanyaoffset@gmail.com
Mobile : 8884495331, 9448223602

36. कबीर की मानवतावादी प्रासंगिकता 147
• डॉ. मल्लिकार्जुन गौडगावी

37. पुरंदरदास की भक्ति के विविध स्वरूप 151
• श्री संतोष जे सूर्यवंशी

38. युग की आवश्यकता और कबीर का साहित्य 154
• डॉ.विलास अंबादास साळुंके

39. संत कबीर की निर्गुणोपासन पद्धति 158
• डॉ. गुलाब राठोड

40. प्रेमाश्रयी शाखा और जायसी 161
• सजिता जे.

41. संत तुकाराम के काव्य में सामाजिकता 164
• प्रा. प्रतापसिंग दत्तुसिंग राजपूत

42. समानता के सार्वकालिक दार्शनिक कबीर 168
• डॉ एम बी नायक

43. मलिक मुहम्मद जायसी कृत पद्मावत में लोक-संस्कृति 171
• डॉ. पुष्पा के.

44. संत कबीर और संत शिशुनाल शरीफ की रचनाओं में सामाजिक चेतना 176
• डॉ. महांतेश आर. अंची

45. तुलसीदासजी का व्यक्तित्व और साहित्यिक विशेषताएँ 180
• डॉ. मधुमालती जि. एस.

46. आधुनिक समाज में संत कबीर और शरण अंबिगर चौडय्या के काव्य की प्रासंगिकता 182
• शिवराजकुमार कल्लूर





47. कबीरदास के साहित्य की प्रासंगिकता 185
• डॉ. परशुराम गणपति मालगे

48. कबीरदास के साहित्य की प्रासंगिकता 188
• डॉ मुक्काप्पा राठोड

49. वर्तमान काल में कबीरदास के साहित्य की प्रासंगिकता 191
• प्रो. हसीनाबी. अत्तार

50. सन्त सहजोबाई के काव्य में आध्यात्मिक चेतना 195
• डॉ. नारायण जी बगली

51. वर्तमान परिप्रेक्ष्य में भक्तिसाहित्य की प्रासंगिकता 198
• डॉ. एम. डी. गुरव

52. आधुनिकता के संदर्भ में संत कबीर की प्रासंगिकता 202
• डॉ. खुदुस अ. पाटील

53. कबीरदास के साहित्य की प्रासंगिकता 206
• डॉ. राम दगडु खलंग्रे

54. कबीर के साहित्य की प्रासंगिकता 209
• करिश्मा अय्युब पठाण

55. संत काव्य की प्रासंगिकता 212
• दीपाली डी.मिरेकर

56. महात्मा बसवेश्वर के वचन साहित्य की प्रासंगिकता 215
• डॉ. कलशेट्टी एम. के.

57. कबीर दास के साहित्य की प्रासंगिकता 220
• मेहराजबेगम सैय्यद

# तुलसीदासजी का व्यक्तित्व और साहित्यिक विशेषताएँ

• डॉ. मधुमालती जि. एस.

हिन्दी साहित्याकाश में तुलसीदास चमकते हुए सूर्य के समान है, जबकि सूरदास जी चन्द्रमा के समान है और इन दोनों कवियों के बाद स्थान प्राप्त करनेवाले कवि केशवदास जी तारे के समाना शेष कवि तो जुगुनू के समान है जो कहीं-कहीं थोडा बहुत काव्य प्रकाश करते है। इस सूक्ति को किसी कवि ने बडे ही सुन्दर रूप में प्रस्तुत करते हुए लिखा है :-

सूर सूर, तुलसी ससी, उडुन केशवदास।
अब के कवि खद्याते सम, जहै-तहै करत प्रकाश ॥

**श्री रामचरित मानस :**

श्री रामचरित मानस के नायक श्रीराम हैं जिनको एक मर्यादा पुरुषोत्तम के रूप में दर्शाया गया है। क्योंकि अखिल ब्रह्माण्ड के स्वामी श्री हरिनारायण भगवान के अवतार है जबकि महर्षि वाल्मीकि कृत-रामायण में श्री राम को एक आदर्श चरित मानव के रूप में दिखाया है जो संपूर्ण मानव समाज को सिखाता है जीवन को किस प्रकार जिया जाय भले ही उसमें कितने भी विघ्न हो तुलसी जी के प्रभु राम सर्वशक्तिमान होते हुए भी मर्यादा पुरूषोत्तम हैं। गोस्वामी जी ने रामचरितमानस का अनुपम शैली में दोहों, चौपाइयों, सोरठों तथा छंद का आश्रय लेकर वर्णन किया है। हमारे प्रभु श्रीराम तो सर्वत्र हैं। वे भक्त के हृदय के अभिलाषा को स्वयं ही जान लेते हैं। तुलसीदास जी की प्रभु श्रीराम के द्वारा आकाशवाणी होती हैं :



प्रभु सर्वग्य दास निज जानी, गति अनन्य तापस नृप रानी।
माँगु-माँगु बरू भइ नभ बानी, परम गंभीर कृपामृत सानी॥

जिनकी प्रशंसा सगुण-और निर्गुण दोनों करते हैं, तुलसीदास जी ने उन लोगों को राम की ही आराधना करने की सलाह दी है जो केवल निराकार को ही परब्रम्ह मानते हैं।

**वैराग्य संदीपनी :**

वैराग्य संदीपनी को माता प्रसाद गुप्त ने अप्रामाणिक माना है। इसका शैली चौपाई और दोहे है वैरग्योपदेश है। इस कृति में तुलसीदास ने शांति पद के सुख का प्रतिपादन न कर अन्यत्र सर्वत्र भक्ति-सुख की उपदेश दिया है। विषय नाम के अनुसार वैराग्योपदेश है।

**विनय पत्रिका :**

तुलसीदास जी से रचित एक ग्रंथ है। इसे ब्रज भाषा में रचना किया गया है। इसमें विनय के पद है। विनय पत्रिका का दूसरा नाम राम विनयावली है। इसमें इक्कीस रागों का प्रयोग हुआ है इसका प्रमुख रस-शांतरस है और इस रस का स्थायी भाव निर्वेद होता है। आध्यात्मिक जीवन को परिलक्षित करती है।

**निष्कर्ष :**

तुलसीदास जी अपने काव्य कि विशेषताओं के कारण हिन्दी साहित्याकाश के सूर्य है। हिन्दी साहित्य और हिन्दू समाज गोस्वामी को चिरऋणी है। उनके दिव्य संदेश ने मृतप्राय हिन्दू जाती के लिए संजीवनी का कार्य किया है। निः संदेह तुलसीदास और उनका काव्य दोनों ही महान थे। कविता के विषय में तो साहित्यिक विद्वानों की उक्ति प्रसि है।

कविता करके तुलसी न लसे, कविता लसी पा तुलसी की कला

■■

---

*Asst. Professor, A.R.M.F.G. College S. N. Layout, Davanagere-04*

भक्तिसाहित्य की प्रासंगिकता

इक्कीसवीं सदी के समय, समाज और संवेदना को ध्यान में रखें तो लगता है कि आज का समय वैश्विक बाजारवाद और मीडिया के प्रभाव से इस तरह ग्रस्त है कि मानवीय संवेदना के लिए कहीं कोई अवकाश नहीं रह गया है। पिछले युगों में जहां परिवार एक इकाई था और संबंध-सूत्र अत्यन्त प्रगाढ़ थे, वहीं इक्कीसवीं शताब्दी तक आते-आते व्यक्ति इकाई बन गया है, और संबंध सूत्र इतने उलझ गये हैं कि कब टूट जाय इसका कोई भरोसा नहीं। देखने में तो आज मीडिया ने वसुधैव कुटुम्बकम् को साकार कर दिया है किन्तु परस्पर संवेदनीयता के अभाव में उसका चरितार्थ होना प्रायः असंभव-सा है। आज भीड़ में रहकर भी व्यक्ति अकेला है और परस्पर संबंधों में भी उसे अविश्वास की गंध मिलती है। यह एक ऐसी विडम्बना है जिससे बचने के लिए इक्कीसवीं सदी में कहीं कोई राह दिखायी नहीं पड़ती। आशय यह है कि इस उलझन-भरी शताब्दी में मानवीयता की राह पाने का अगर कोई मार्ग सामने दिखता है तो वह भक्ति काव्य में ही उपलब्ध है।जिस युग में सूर,तुलसी,जायसी, कबीर, मीरा, रैदास, रज्जब तथा अन्य भक्तकवि होकर गए वह निस्संदेह हिंदी साहित्य का 'स्वर्णकाल' ही है। इस तरह इक्कीसवीं सदी में भक्ति काव्य की प्रासंगिकता विचारणीय है।

9 789383 813513

Twarit Mudran, Gadag

ದಶಮಾನೋತ್ಸವ ವರ್ಷ 2018-19

ದಾವಣಗೆರೆ ವಿಶ್ವವಿದ್ಯಾನಿಲಯ


ಶಿವಗಂಗೋತ್ರಿ, ದಾವಣಗೆರೆ 577007, ಕರ್ನಾಟಕ

# ಭಾರತ ಇತಿಹಾಸ ಮತ್ತು ಇತಿಹಾಸ ರಚನಾಶಾಸ್ತ್ರ

## ಇತಿಹಾಸ ಪುನರ್‌ರಚನೆಯಲ್ಲಿರುವ ಸವಾಲುಗಳು

ರಾಷ್ಟ್ರೀಯ ವಿಚಾರ ಸಂಕಿರಣ

29-30 ಮಾರ್ಚ್ 2019





ಸಂಪಾದಕರು

**ಡಾ. ವೆಂಕಟರಾವ್ ಎಂ ಪಾಲಾಟಿ**



ಇತಿಹಾಸ ಅಧ್ಯಯನ ಮತ್ತು ಸಂಶೋಧನ ವಿಭಾಗ

Decennial Year 2018-19

**DAVANGERE UNIVERSITY**

Shivagangotri, Davangere-577 007 Karnataka

# HISTORY AND HISTORIOGRAPHY OF INDIA:
## CHALLENGES IN REWRITING THE HISTORY

**National Seminar 29-30 March 2019**


**Editor**

**Dr.Venkatarao M Palati**
**M.A.,M.Ed.,M.Phil.,PGDHE.,Ph.D.,**
Chairman
Department of Studies and Research in History
Davangere University, Shivagangothri, Davangere-07

**Editorial Board**

**Dr.H.S.Rakesh**
**M.A.,M.Phil.,B.Ed.,PGD in A,C&T.,Ph.D.,D.Litt.,**
Teaching Assistant
Department of Studies and Research in History
Davangere University, Shivagangothri, Davangere-07

**Dr. P. Nagabhushanagoud**
**M.A.,B.Ed.,PGD in A,C&T., PGD in Epi.,Ph.D.,**
Teaching Assistant
Department of Studies and Research in History
Davangere University, Shivagangothri, Davangere-07


**DEPARTMENT OF STUDIES AND RESEARCH IN HISTORY**

**HISTORY AND HISTORIOGRAPHY OF INDIA:**
CHALLENGES IN REWRITING THE HISTORY

**Editor :**
**Dr. Venkatarao M Palati**

**Published by :**
Department of Studies and Research in History
Davangere University, Shivagangotri,Davangere,
Karnataka 577007, India
Cell- +91 80738 22271+91 99868 10066, +91 97404 81715
Email : hodhistorydud@gmail.com

Pages: IX+ 226 = 237

Price: 400/-

**©Editors**

**ISBN: 978-93-88551-02-1**

Cover page: Indrakumar H.B.

**DTP and layout by :**Revanasiddappa H.

**Printing by :** Malleshwara Printers, Bhadravati

**Disclaimer**

The Authors solely responsible for the contents of the papers compiled in this book. The publishers or editors don't take any responsibility for the same in any manner. Errors, if any, are purely unintentional and readers are requested to communicate such errors to the editors or publishers to avoid discrepancies in future.

## ಪರಿವಿಡಿ

1. ಹೊಸ ಸಾಧ್ಯತೆಗಳಿಗೆ ತೆರೆದ ಕರ್ನಾಟಕದ ಸಮಕಾಲೀನ ಶಿಲ್ಪಕಲೆ/ 12
-ದತ್ತಾತ್ರೇಯ. ಎನ್. ಭಟ್ಟ.

2. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭ; ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ, ನಾಡು, ನುಡಿ ಪ್ರಜ್ಞೆ / 15
-ಅಂಜಿನಪ್ಪ. ಡಿ

3. ಚರಿತ್ರೆಯ ಬರವಣಿಗೆಗಳಲ್ಲಿ ವಿವಿಧ ಆಯಾಮಗಳು/ 18
-ಡಾ.ಎಂ.ಹೆಚ್.ವಿಜಯಕುಮಾರ್

4. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿ ಮಹಿಳೆಯರು/ 22
-ಡಾ.ಕಾವ್ಯಶ್ರೀ ಜಿ.,

5. ದಾವಣಗೆರೆ ಜಿಲ್ಲೆಯಲ್ಲಿ ಜೈನ ಧರ್ಮ/ 27
-ನಾಗರಾಜ ಪಿ. ಕುರ್ಕಿ.

6. ಕರ್ನಾಟಕ ರಾಜ್ಯ ರೈತ ಸಂಘ: ಒಂದು ಅವಲೋಕನ/ 31
-ವಿಶ್ವನಾಥ .ಕೆ.ಎನ್.

7. ಭಾರತದಲ್ಲಿ ಶೈಕ್ಷಣಿಕ ವ್ಯವಸ್ಥೆ ನಡೆದು ಬಂದ ದಾರಿ/ 35
-ಶ್ರೀಮತಿ ನಿರ್ಮಲಾ ಶಾಂತಕುಮಾರ

8. ಭಿತ್ತಿ ಚಿತ್ರಕಲೆ/ 40
-ಹೇಮಲತಾ ಎನ್. ಎಸ್.

9. ಹಾವೇರಿ ಜಿಲ್ಲೆಯ ಪ್ರಾಚೀನ ಶಿಕ್ಷಣ ವ್ಯವಸ್ಥೆ/ 43
-ಡಾ.ಶಿವಯೋಗಿ ಕೋಲಿಶೆಟ್ಟರ

10. ಕರ್ನಾಟಕದಲ್ಲಿ ಮುದ್ರಣಕಲೆ ಪ್ರಯೋಗಗಳು/ 48
-ಶಿವಶಂಕರ ಸುತಾರ್

## ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭ; ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ, ನಾಡು, ನುಡಿ ಪ್ರಜ್ಞೆ

ಅಂಜಿನಪ್ಪ ಡಿ ,ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ , ಎ ಆರ್ ಎಂ ಪ್ರಥಮ ದರ್ಜೆ ಕಾಲೇಜು ,ದಾವಣಗೆರೆ-04

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವಿದೆ. ಇಷ್ಟೊಂದು ಅವಧಿಯೊಳಗೆ ಅನೇಕ ಕಾಲಘಟ್ಟಗಳು ಉರುಳಿ ಹೋಗಿವೆ. ಬಹಳಷ್ಟು ಬದಲಾವಣೆಗಳು ಕಂಡಿವೆ. ಜನಪದ, ಶಾಸನಗಳ ಮುಖೇನ ಪ್ರಕಟಗೊಳ್ಳುತ್ತ ತನ್ನದೆ ಆದ ಲಿಪಿಯನ್ನು ಕಂಡುಕೊಂಡು ದ್ರಾವಿಡ ಭಾಷೆಯೊಳಗೊಂದಾಗಿ ಅಗಾದವಾಗಿ, ವಿಶಾಲವಾಗಿ ಬೆಳೆದು ಬಂದಿದೆ.

7ನೇ ಶತಮಾನದಲ್ಲಿ ಕವಿರಾಜ ಮಾರ್ಗದಲ್ಲಿ ಶ್ರೀವಿಜಯ 'ಕಾವೇರಿಯಿಂದ ಮಾ, ಗೋದಾವರಿ ವರಮಿರ್ದ ನಾಡೋಳ್' ಎಂದು ಕನ್ನಡದ ಅಭಿಮಾನವನ್ನು ತೋರಿಸಿದ್ದಾನೆ. ಇದಲ್ಲದೆ ಇದಕ್ಕಿಂತಪೂರ್ವದಲ್ಲಿಸಾಕಷ್ಟು ಕುರುಹುಗಳುಲಭ್ಯವಾಗಿವೆ. ನಂತರದಲ್ಲಿ ವಡ್ಡಾರಾಧನೆಯಂತ ಕೃತಿಗಳು ಲಭ್ಯವಾಗಿದೆ. ಈ ಕೃತಿಯ ಪೂರ್ವದಲ್ಲಿ ಅಸಗ, ಗುಣನಂದಿ, ಗುಣವರ್ಮರ ಕೃತಿಗಳು ಇದ್ದವು ಎನ್ನುವ ಉಲ್ಲೇಖಗಳು ದೊರೆತರು ಉಪಲಭ್ಯವಿಲ್ಲ.

ಕ್ರಿ ಶ. 450 ರಿಂದ 12 ನೇ ಶತಮಾನದ ಅವಧಿಯಲ್ಲಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ಎಂಬ ಸಾಹಿತ್ಯರೂಪ, ಪಂಪ, ಪೊನ್ನ, ರನ್ನಾದಿಯಾಗಿ ಕವಿಗಳು, ಸಾಹಿತ್ಯವನ್ನು ಅತ್ಯಂತ ಶ್ರೀಮಂತಗೊಳಿಸಿದ್ದಾರೆ. ವಾಗ್ದೇವಿಯ ಬೀಗಮುದ್ರೆಯನ್ನು ಹೊಡೆದು ಸಾಹಿತ್ಯದ ಭಂಡಾರವನ್ನು ದಶದಿಕ್ಕಿಗೂ ಹಂಚಿದರು. 12 ನೇ ಶತಮಾನದಲ್ಲಿ ಸರಳವೆನ್ನುವ ವಚನ ರೂಪವನ್ನು ಬಳಸಿ ಇಡೀ ಜನಮಾನಸದೊಳಗೆ ಘಟ್ಟಿಯಾಗಿ ಬೇರೂರಿ ನಿಲ್ಲುವಂತೆ ಮಾಡಿದೆ.

ಸಾಹಿತ್ಯ ಜನಪದ, ತ್ರಿಪದಿ, ಕಂದ, ರಗಳೆ, ಷಟ್ಪದಿ, ಸಾಂಗತ್ಯ, ಕೀರ್ತನೆ ಹೀಗೆ ವಿವಿಧ ರೂಪವನ್ನು ಪಡೆದುಕೊಂಡು ಬಂದಿದೆ. ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಕಾಲಘಟ್ಟಗಳಾಗಿ ಪಂಪ,ಯುಗ, ಬಸವಯುಗ, ಹರಿಹರಯುಗ, ಕುಮಾರವ್ಯಾಸ ಯುಗ, ಎಂದು ಕವಿಗಳ ಪ್ರಭಾವವನ್ನು ಹೊಂದಿದೆ. ಮುದ್ದಣನಿಂದ ಇಲ್ಲಿಯ ವರೆಗೆ ಭಾಷಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಲವು ಮಾರ್ಪಾಡುಗಳೊಂದಿಗೆ ಸಾಗುತ್ತ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ.

ಹೊಸಗನ್ನಡ ಆರಂಭದ ಕಾಲದ ಪೂರ್ವದಲ್ಲಿ ಮತ್ತು ನಂತರದಲ್ಲಿ ಸ್ವಾತಂತ್ರ್ಯದ ಕಾವು ಏರತೊಡಗಿತ್ತು. 1857 ರಿಂದ ಸ್ವಾತಂತ್ರ್ಯಚಳುವಳಿ ಗಾಂಧೀಜಿಯ ನೇತೃತ್ವದಲ್ಲಿ ಆರಂಭವಾಯವಾಯಿತು. ಇವರ ನೇತೃತ್ವದಲ್ಲಿ ಅನೇಕ ಚಳುವಳಿಗಳು ನಡೆದವು. ಇದರ ಜೊತೆಗೆ ಅಂದಿನ ಕವಿಗಳು ಸ್ವಾತಂತ್ರ್ಯದ ಬಗ್ಗೆ ಅರಿವು ಮೂಡಿಸುವ ಉತ್ಸಾಹ ತುಂಬುವ ಅನೇಕ ಕವಿತೆಗಳನ್ನು ಬರೆಯುವ ಮತ್ತು ಹಾಡಿಸುವ ಮೂಲಕ ಜನರೊಳಗೆ ಜಾಗೃತಿಯನ್ನು ಮೂಡಿಸುವಂತಹ ಕೆಲಸವನ್ನು ಮಾಡಲಾಯಿತು. ಸ್ವಾತಂತ್ರ್ಯದ ಸಲುವಾಗಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ ಅನೇಕ ಕವಿಗಳು ಇದ್ದಾರೆ. ಅದರಲ್ಲಿ ಬೆಟಗೇರಿ ಕೃಷ್ಣಶರ್ಮರು ಒಬ್ಬರು. ಇವರು ಸ್ವಾತಂತ್ರ್ಯ ಪೂರ್ವ ಹಾಗೂ ನಂತರದಲ್ಲಿ ಕಾಲಘಟ್ಟದ ನಾಡಿನ ಚರಿತೆಯ ಸಾಕ್ಷಿಪ್ರಜ್ಞೆಯುತ್ತಿದ್ದರು. ಅಂದು ರಾಷ್ಟ್ರೀಯತೆ, ಸ್ವಾತಂತ್ರ್ಯ ಕಲ್ಪನೆ, ರಾಷ್ಟ್ರಪ್ರೇಮ, ಕನ್ನಡಾಭಿಮಾನ, ನಾಡು ನುಡಿ ವೈಭವತೆ, ಪ್ರಕೃತಿ ಆರಾಧನೆ ಮುಂತಾದ ಅಂಶಗಳನ್ನು ತಮ್ಮ ತಮ್ಮ ಕವಿತೆಗಳಲ್ಲಿ ಬರೆದು ಜನರೊಳಗೆ ಪ್ರಜ್ಞೆಯನ್ನು ಮೂಡಿಸುವ ಕೆಲಸವನ್ನು ಮಾಡಿದರು. ಭಾರತಮಾತೆ ಎಲ್ಲರ ಪೊರೆವ ತಾಯಿಯಾದಳು, ಕನ್ನಡಮಾತೆ ಹೆತ್ತ ತಾಯಿಯಾದಳು ಈ ಕಲ್ಪನೆಯೊಂದಿಗೆ ಕವಿಗಳು ಪ್ರೇರಣೆ ತುಂಬುವ ಕೆಲಸವನ್ನು ಮಾಡಿದರು.

ಮಹಾಲಿಂಗ ರಂಗ : 'ಸುಲಿದಬಾಳೆಹಣ್ಣಿನಂತೆ ಕಳಿದಸಿಗುರಿನ ಕಬ್ಬಿನಂತೆ ಅಳಿದ ಉಷ್ಣಂದಹಾಲಿನಂತೆಸುಲಭವಾಗಿರುವುದು'ನಮ್ಮ ಕನ್ನಡಭಾಷೆಸುಲಲಿತ ಮತ್ತು ಸುಲಭವಾಗಿ ಕಟ್ಟಿಕೊಳ್ಳಬಹುದಾದ ಬೆಳಸಬಹುದಾದ ಭಾಷೆಯಾಗಿದೆ ಎಂದು ಹೇಳುತ್ತಾರೆ.

ಹುಯಿಲುಗೋಳ ನಾರಾಯಣರಾವ್ ; 'ಉದಯವಾಗಲಿನಮ್ಮ ಚೆಲುವ ಕನ್ನಡನಾಡು

ಬದುಕು ಬಹುದಿನ ನಿಧಿಯು ಸದ್ಭಾವದ ಗೂಡು
ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಎಂದೆಂದೂ ಯುಗ ಯುಗದಲಿ ಕನ್ನಡದ ಹಣತೆ
ತಾಯ್ನುಡಿಯ ಸಿರಿನೆಲದಲಿಗೆ ಅಭಿಮಾನವೇ ಬೆಳಕೆ

ಎಂದು ಹೇಳುವಲ್ಲಿ ಹೊಸದೊಂದು ಕನ್ನಡ ನಾಡು ಉದಯವಾಗಲಿ ಎನ್ನುವ ಸದಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಕನ್ನಡ ನಾಡು ಉದಯವಾಗಿ ಯುಗಯುಗಗಳು ವಿಶ್ವದ ತುಂಬೆಲ್ಲ, ತಾಯಿಯ ಕೀರ್ತಿಯ ಸಿರಿ, ಅಭಿಮಾನ ಎಲ್ಲರ ಬೆಳಕೆಯಾಗಲೆಂದು ಆಶಿಸುತ್ತಾರೆ.

ಆರ್ ಎನ್ ಜಯಗೋಪಾಲ ; ' ಅಪಾರ ಕೀರ್ತಿ ಗಳಿಸಿಮೆರೆದ ಭವ್ಯ ನಾಡಿದು
ಕರ್ನಾಟಕವಿದುವೆ ನೃತ್ಯ ಶಿಲ್ಪಕಲೆಯ ಬೀಡು'

ಕನ್ನಡ, ಕರ್ನಾಟಕದ ಕೀರ್ತಿ ಜಗದ ತುಂಬೆಲ್ಲ ಹಬ್ಬಿದೆ. ಅಪಾರ ಮನ್ನಣೆಯನ್ನು ಪಡೆದುಕೊಂಡಿದೆ. ಸಂಗೀತ, ಸಾಹಿತ್ಯ, ನೃತ್ಯ ಶಿಲ್ಪಕಲೆಗೆ ಹೆಸರಾದ ನಾಡಿದು ಎಂದು ಹೇಳುತ್ತಾರೆ.

ಬೆಟಗೇರಿ ಕೃಷ್ಣಶರ್ಮರು ; 'ನಾವುಭಾರತೀಯರು
ಭಾರತೀಯರು ನಾವು ಭಾರತೀಯರು,
ಮಲೆತು ನಿಂತ ವೈರಿಗಳನು ಗೆಲಿದು
ನಿನ್ನ ನಲುಮೆಯಲ್ಲಿಯೆ ಚೆಲುವಿನಿಂದೆ ಇಳಿಯೂನಾಳಿ
ಬಲುಹುಗಾರರೆಂದು
ನಲಿದು ಭಾರತೀಯರು ನಾವು ಭಾರತೀಯರು.'

ಎಂದು ಹೇಳುವುದರ ಮೂಲಕ ನಾವೆಲ್ಲರೂ ಒಂದೆ ಎಂಬ ಭಾವನೆಯನ್ನು ಮೂಡಿಸುವ ಕೆಲಸವನ್ನು ಮಾಡಿದರು. ಮತ್ತೊಂದು ಕಡೆ
' ಎನಿತು ಇನಿತು ಈ ಕನ್ನಡನುಡಿಯು
ಮಾನವನು ತಣಿಸುವ ಲೋಕದ ಸುಧೆಯು' ಎಂದು ಕನ್ನಡಾಭಿಮಾನವನ್ನುಮೆರೆದರು. ಇವರಮತ್ತೊಂದು ಕವನ 'ಅರುಣೋದಯ' ದಲ್ಲಿ ಕನ್ನಡನಾಡಿನಮುಂಬಾಗಿಲು ಬೆಂಬತ್ತಿದಬೆಳಕು ಇದೇ ತರದು ಕನ್ನಡನಾಡಿನ ಗುಡಿಗಳನಕೆಹೊಸಬಣ್ಣವನೇಹಾಕುವನು'ನಾನಿದನೆಹಾಡುವೆನುಹಾಡು ಎಂಬ ಕವನದಲ್ಲಿನನ್ನದು ಕನ್ನಡನಾಡು
ಕನ್ನಡ ನಾಡಿನ ಹಾಡನು ಬರೆಯುವದಂತೆ ನಾಲದು ಮುಗಿಲು' ಎಂದುಹಾಡುತ್ತಾರೆ.

ಒಡೆದ ಕನ್ನಡಿ ; ರನ್ನಗನ್ನಡಿಯೊಳದ ಕನ್ನಡ ನಾಡು
ಛಿನ್ನ ಛಿನ್ನ ಆಗಿ ಬಿದ್ದಿಹುದು ನೋಡು ಅದರಲ್ಲಿ ನೋಡಿದರೆ ನಮ್ಮಾಕಿನೆಳಲನ್ನು ಎದೆಯು ದಡ ದಡಿಸುವುದು ಕಂಡು ವಿಕೃತಿಯನು' ಎಂದು ಕನ್ನಡಾಭಿಮಾನವನ್ನು ಅಭಿವ್ಯಕ್ತಪಡಿಸಿದ್ದಾರೆ

ಕಯ್ಯಾರ ಕಿಞ್ಞಣ್ಣರೈ ; ' ಏರುತಿಹುದುಹಾರುತಿಹುದು
ನೋಡು ನಮ್ಮ ಬಾವುಟ,
ಬಾನಗಲ ಹೊಡೆದು ಹೊಡೆದು ಪಟ ಪಟ' ಎಂದು ಕನ್ನಡದಹಿರಿಮೆಯನ್ನುಸಾರಿದರು.

ಶಾಂತಕವಿಗಳು ; ' ರಕ್ಷಿಸು ಕರ್ನಾಟಕ ದೇವಿ, ನಂ ರಕ್ಷಿಸು ಕರ್ನಾಟಕ ದೇವಿ. ದೀಕ್ಷೆಯ ತೊಡು ಇಂದೇ ಕಂಕಣ ಕಟ್ಟಿಂದೇ ಕಂಕಣ ಕಟ್ಟಿಂದೇಕನ್ನಡ ನಾಡೊಂದೇ ಇನ್ನೆಂದೂ ತಾನೊಂದೇ. ಜಾರ ಮತ ಪಂಥಗಳ ತೊರೆದು ಬನ್ನಿ ಭಾರತೀಯ ಮಕ್ಕಳೇ ಒಂದಾಗಿ ಬನ್ನಿ ಪ್ರಾಣವನೆ ಪಣಕಿಟ್ಟು ರಾಷ್ಟ್ರರಕ್ಷಣೆ ಮಾಡಿ ಕೊರಳೆತ್ತಿ ಕೈ ಎತ್ತಿ ಧ್ವಜವೆತ್ತಿ ದಶದಿಕ್ಕು ಜಿಗಿವಂತೆ ವೀರ ಘೋಷಣೆ ಗೈದು ವಿಶ್ವವೇ ಅರಿವಂತೆ ವಿಜಯವನು ಸಾರಿ' ಎನ್ನುತ್ತ ಕನ್ನಡಬಂಧುಗಳನ್ನು ಕೃಪಿಸಿ ಕರೆಯುತ್ತಾರೆ. ಜಾತಿಮತಪಂಥಗಳಭಾಷೆಗಳ ದ್ವೇಷಗಳ ಕಷ್ಟಾಟ ಹುಚ್ಚಾಟಗಳ ತೊರೆದುಸುಮಂಗಳ ಕೀರ್ತಿ ಕೇತನವೆತ್ತಿಸಿಂಹ ಗರ್ಜನೆಮಾಡಿ ಬನ್ನಿಬಂಧುಗಳೆ ರಾಷ್ಟ್ರ ರಕ್ಷಣೆಗೋಡಿ ಬನ್ನಿ ಎಂದು ಒಂದುಗೂಡಿಸುವ ಪ್ರಯತ್ನವನ್ನು ಮಾಡುತ್ತಾರೆ.

ಮಾಸ್ತಿ ವೆಂಕಟೇಶ್ವರ ಅಯ್ಯಂಗಾರ್ ; 'ಹರಿದು ತುಂಡಾಗಿಹುವುದು ಇಂದು ಕನ್ನಡನಾಡು, ಅಣ್ಣ ತಮ್ಮಂದಿರು ತಾವಣ್ಣ ತಮ್ಮಂದಿರೆಂದು ತಿಳಿಯಲಾರರುನಡೆಯಲಾರರು; ಬಾಬಂಧು. ಹರಿದುಹೋದ ಕನ್ನಡನಾಡನ್ನು ಅಣ್ಣ ತಮ್ಮಂದಿರಾಗಿ ಒಟ್ಟುಗೂಡಿ ಉಳಿಸೋಣ ಬನ್ನಿ' ಎಂದು ಕರೆಯನ್ನು ಕೊಡುತ್ತಾರೆ.

ಬೆನಗಲ್ ರಾಮರಾವ್ ; 'ಕನ್ನಡವನುಳಿದೆನಗೆ/ ಅನ್ಯ ಜೀವನವಿಲ್ಲ
ಕನ್ನಡವೇಎನ್ನುಸಿರು/ಹೆತ್ತನ್ನ ತಾಯಿ'

ಇವರ ಇಡೀ ಜೀವನವೇ ಕನ್ನಡ ತಾಯಿ. ಅವಳಿಗೋಸ್ಕರ ನನ್ನ ಜೀವನವೇ ಮುಡಿಪು' ಎಂದುಹೇಳುತ್ತಾರೆ.

ಪು.ತಿ.ನರಸಿಂಹಚಾರ್ ; 'ಕನ್ನಡ ಉಳಿಸಿ ಕನ್ನಡಬೆಳಸಿ
ಕನ್ನಡವನೆ ಬಳಸಿ
ಕನ್ನಡ ಜನವಲ್ಲವೆ ಕನ್ನಡವನು
ಉಳಿಸುವರಾರೈ ಬೆಳಸುವರಾರೈ'

ಕನ್ನಡವನ್ನು ಉಳಿಸುವ ಬೆಳೆಸುವ ಕೆಲಸ ಪ್ರತಿಯೊಬ್ಬ ಕನ್ನಡಿಗನ ಮೇಲೆ ಇದೆ. ಕನ್ನಡದವರಲ್ಲದೆ ಬೇರೆಯವರು ಅದನ್ನು ಉಳಿಸಬೇಕು. ಅನ್ಯ ಭಾಷೆಗೆ ಮರುಳಾಗದೆ ಈ ಭಾಷೆಯನ್ನು ಉಳಿಸಲು ಪಣತೊಡಬೇಕೆಂದು ಕರೆಕೊಡುತ್ತಾರೆ.

ಕುವೆಂಪು : 'ನಾನಳಿವೆನೀನಳಿವೆ
ನಮ್ಮೆಲುವುಗಳ ಮೇಲೆ
ಮೂಡುವುದು ಮೂಡುವುದು
ಭಾರತದ ಅಲೆ ನವ ಭಾರತದ ಅಲೆ' ಎಂದು ಕುವೆಂಪುರವರುಸ್ವಾತಂತ್ರಸಂಗ್ರಾಮದಲ್ಲಿ ಆಗಬಹುದಾದಸಂದರ್ಭಗಳನ್ನುಹೇಳುತ್ತಾರೆ.ಮತ್ತೊಂದು ಕವನ'ಇಂದಿನ ದೇವರು' ಎಂಬ ಕವಿತೆಯಲ್ಲಿ'ನೂರು ದೇವರುಗಳನುನೂಕಾಚೆ ದೂರ ಗುಡಿ, ಚರ್ಚ್, ಮಸೀದಿ, ಮಂದಿರಗಳ ಬಿಟ್ಟು ಹೊರಬಾರ ಭಾರತಾಂಬೆಯೆ ನಮಗಿಂದು ಪೂಜಿಸುವ ಬಾರ' ಜಾತಿ, ಮತ, ಪಂಥ, ವರ್ಗ, ವರ್ಣ, ಇವು ಯಾವುವು ಅಡ್ಡಬಂದು ಕಟ್ಟಾತಿ ಸಾಯುವಬದಲುಭಾರತಾಂಬೆಯೇನಮ್ಮನ್ನೆಲ್ಲ ತಾಯಿಎಂದು ಗೊತ್ತಿರಬೇಕು. ಸಮಾಜದಲ್ಲಿ ಕಸ ಕಡ್ಡಿಗಳಂತೆ ಗುಡಿ ಮಸೀದಿ ಚರ್ಚ್ ಗಳೇ ತುಂಬಿ ಬಿದ್ದಿವೆ.ಇವನ್ನೆಲ್ಲ ಬಿಟ್ಟು ಹೊರಬಂದು ನಾವೆಲ್ಲರು ಹೊಂದಾಗಬೇಕು. ಭಾರತೀಯರಾಗಬೇಕು. ಕನ್ನಡಿಗರಾಗಬೇಕು.

'ಅಡಿ ಮುಂದಿಡುತಲಿ ರಣದಲಿಹಗೆಗಳಹೊಡೆಯುವೆನಿಲ್ಲವೆಮಡಿಯುವೆನು' ಎಂದುಹೇಳುವಮೂಲಕ ಕಾವ್ಯಗಳಲ್ಲಿ ರಾಷ್ಟ್ರಪ್ರೇಮ, ದೇಶಭಕ್ತಿ, ಕನ್ನಡಾಭಿಮಾನ, ಸ್ವಾತಂತ್ರ್ಯ ಮುಂತಾದ ವಸ್ತುಗಳು ಭಾವೋದ್ವೇಗಕ್ಕೆ ಒಳಗಾದಂತೆ ಅಭಿವ್ಯಕ್ತಿಸಿದ್ದಾರೆ.

'ನೀಮೆಟ್ಟುವನೆಲ ಅದೆ ಕರ್ನಾಟಕ
ನೀ ನೇರುವ ಮಲೆ ಸಹ್ಯಾದ್ರಿ
ನೀ ಮುಟ್ಟುವ ಮರ ಶ್ರೀಗಂಧದ ಮರ\ನೀ ಕುಡಿಯುವ ನೀರ್ ಕಾವೇರಿ' ಎಂದು ಕುವೆಂಪುರವರು ಕನ್ನಡನೆಲಭಾಷೆಸಂಸ್ಕೃತಿ ಪ್ರಕೃತಿಯ ಬಗ್ಗೆ ಹೇಳಿದ್ದಾರೆ. ಅಲ್ಲದೆ ಕನ್ನಡ ಅಭಿಮಾನವು ಹೆಚ್ಚಾಗಿ ಇವರ ಕವಿತೆಗಳಲ್ಲಿ ಇದೆ ಎಂದರೆ ತಪ್ಪಾಗಲಾರದು.

ಹರಕೆ(198) ಕವನಲ್ಲಿ ' ಕನ್ನಡ ಎನೆ ಕುಣಿದಾಡುವುದೆನ್ನದೆ ಕನ್ನಡ ಎನೆ ಕಿವಿನಿಮಿರುವುದು' ಎಂದುಹಾಡುವರು. 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂನೀ ಕನ್ನಡವಾಗಿರು ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂದುಹೇಳುವಮೂಲಕಪ್ರತಿಯೊಬ್ಬ ಕನ್ನಡಿಗನಿಗೂಸ್ಫೂರ್ತಿಯನ್ನು ತುಂಬುತ್ತದೆ. ಮತ್ತೊಂದು ಕವನದಲ್ಲಿ' ಕನ್ನಡಕೆಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡುನನ್ನ ಆನಂದ. ಜೋಗುಳದಹರಕೆಯಿದುಮರೆಯದಿರು ಚಿನ್ನಮರೆತೆಯಾದರೆ ಅಯ್ಯೋ ಮರೆತಂತೆ ನನ್ನ' ಎಂದು'ಕನ್ನಡಕ್ಕಾಗಿ ಹೋರಾಡು ಅದನ್ನು ಕಾಪಾಡು ಅದನ್ನೆಂದಿಗೂಮರೆಯಬೇಡ ಎನ್ನುತ್ತಾರೆ. ನಿಮ್ಮನುಡಿ ನಿಮ್ಮ ಗಂಡಸುತನಕೆಹಿರಿನಾಕ್ಷಿ ಗೆಲವಿದ್ದರದಕೆನಿಮಗಿಹುದುಶಕ್ತಿ' ಎಂದು ಕನ್ನಡಿಗರ ರಕ್ತ ಕುದಿಯುವಂತೆಹೇಳುತ್ತಾರೆ.

' ಕಣ್ದೆರೆಯಿರೇಳಿ ಓ ಕನ್ನಡದ ಮಕ್ಕಳಿರಾ
ಗರ್ಜಿಸುವುದನು ಕಲಿತು ಸಿಂಹವಾಗಿ
ನಖದಂಷ್ಟ್ರ ಕೇಸರಂಗಳ ಬೆಳಸಿಹುರಿಗೊಂಡು
ಶಿರವೆತ್ತಿ ನಿಂತು ಕುಲಿತನವ ನೀಗಿ' ಕನ್ನಡಿಗರುಸಿಂಹವಾಗಿ ಘರ್ಜಿಸಬೇಕು. ಅವರು ಎಂದಿಗೂ ಯಾವಭಷೆಯ ಎದುರುಶಿರಬಾಗಿ ನಿಲ್ಲಬಾರದು ಎನ್ನುತ್ತಾರೆ. ಮುಂದುವರೆದು'ಬಾರಿಸು ಕನ್ನಡ ಡಿಂಡಿವ ಓ ಕರ್ನಾಟಕ ಹೃದಯ ಶಿವ ಸತ್ತಂತಿಹರನು ಬಡಿದೆಚ್ಚರಿಸು' ಎಂದು ಕನ್ನಡಿಗರನ್ನು ಡಿಂಡಿಮವಾಗಬೇಕು ಎಂದುಸಾರಿಹೇಳುತ್ತಾರೆ.ಅಲ್ಲದೆ'ನನ್ನ ದೇಶನನ್ನ ಜನನನ್ನಮಾನಪ್ರಾಣಧನ ತೀರಿಸುವೆನೆ ಅದರ ಋಣ ಈ ಒಂದೇ ಜನ್ಮದಿ' ಎನ್ನುತ್ತಾರೆಮತ್ತೊಂದು ಕವನದಲ್ಲಿ'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಪಾಂಚಜನ್ಯ ಮೊಳಗುತ್ತದೆ ಎಂದು ಅಭಿಮಾನದಿಂದ ಹೇಳಿರುವುದನ್ನು ಕಾಣುತ್ತೇವೆ.

ಜಿ.ಎಸ್ ಶಿವರುದ್ರಪ್ಪ: ಕನ್ನಡದ ಬಗ್ಗೆ ಇವರೂ ಕೂಡ 'ಭರತಭೂಮಿ ಕಂಡ ಕನಸಮನನಮಾಡುಮಾನವ ಒಳಗೆ ಹೊರಗೆ ಬೆಳಕ ಕಂಡು ಬದುಕುವಂತೆ ಸಾಹಸ' ಎಂದುಹೇಳುತ್ತಾರೆ.ಅಲ್ಲದೆ'ನಾಡಿನುದ್ದಕ್ಕೂಹಾರುವ ಧ್ವಜದಡಿ ತೆರೆದಿದೆ ಇತಿಹಾಸದಹಾದಿಹಳೆಯನೆನಪುಗಳೂಹೊಸಭರವಸೆಗಳುನೆರಳು ತುಗುತಿವೆಸಾಲಾಗಿ' ಎನ್ನುತ್ತಾರೆಹಾಗೂ'ಒಂದೇ ಒಂದೇನಾವೆಲ್ಲರು ಒಂದೇ. ಈ ದೇಶದೊಳೆಲ್ಲಿದ್ದರು ಭಾರತ ನಮಗೊಂದೇ' ಎನ್ನುವರು.

ಜಿ ಪಿ ರಾಜರತ್ನಂ : 'ಕನ್ನಡಪದಗೊಳ್ ಅಂದ್ರ ರತ್ನಂಗೆಪ್ರಾಣ'

ಗೋಪಾಲ ಕೃಷ್ಣ ಅಡಿಗ : 'ನಾವೆಲ್ಲರು ಒಂದೆ ಜಾತಿ ಒಂದೆಮತ ಒಂದೆ ಕುಲನಾವುಮನುಜರುನಾವುಮನುಜರು' ಕನ್ನಡ-ಕನ್ನಡಿಗ-ಕರ್ನಾಟಕ ಇಲ್ಲಿ ಇರುವವರೆಲ್ಲ ಒಂದೆಬೇರೇನು ಇಲ್ಲ ಎನ್ನುತ್ತಾರೆ.

ಡಿ ಎಸ್ ಕರ್ಕಿ : 'ಹಚ್ಚೇವು ಕನ್ನಡದದೀಪ ಕರುನಾಡದೀಪಸಿರಿನುಡಿಯದೀಪ ಒಲವೆತ್ತಿ ತೋರುವಾದೀಪ' ಎಂದು ಕನ್ನಡದದೀಪವನ್ನುಹಚ್ಚುವುದರಮೂಲಕ ಕನ್ನಡದಬೆಳಕನ್ನು ಎಲ್ಲರ ಎದೆ ಗೂಡೊಳಗೆಬೀರುವಂತೆಮಾಡಿದ್ದಾರೆ.

ಚನ್ನವೀರ ಕಣವಿ : ' ಕನ್ನಡ ಕನ್ನಡ ಕನ್ನಡದೆಂದುಲಿ ಕನ್ನಡ ನಾಡಿನ ಓ ಕಂದ ಕನ್ನಡ ಭಾಷೆಯ ಕೀರುತಿ ಹಬ್ಬಿಸು ಕನ್ನಡ ತಾಂಬುಗೆ ಆನಂದ' ಎಂದುಹೇಳುತ್ತಾರೆ.

ಕೆ ಎಸ್ ನಿಸಾರ್ ಅಹ್ಮದ್ : 'ಕನ್ನಡವೆಂದರೆಬರಿ ನುಡಿಯಲ್ಲಹಿರಿದಿರೆ ಅದರರ್ಥ ಜಲವೆಂದರೆ ಕೇವಲನೀರಲ್ಲ ಅದುಪಾವನ ತೀರ್ಥ" ಎನ್ನುತ್ತಾರೆ. ಅಲ್ಲದೆ'ಸದಾ ಉರಿಯುತಿರುವ ಹಾಗೆ ಸ್ವಾತಂತ್ರದ ಹಣತೆ. ದುಡಿಮೆ ತೈಲವೆರೆಯುತಿರಲು ಜಡವಿಲ್ಲದ

ಜನತೆ ಎಂತು ಕುಂದಬಹುದು ತಾಯ್ನಾಡಿನ ಘನತೆ ಸದಾ ಉಲಿಯುತಿರುವ ಹಾಗೆ ಕನ್ನಡದ ಗಡಿ ಕಾಯೆ ಗುಡಿಕಾಯೆ ನುಡಿಕಾಯೆ ಕಾಯಲಾರೆನೆ ಸಾಯೆ ಒಬನ್ನಿ ಬನ್ನಿ' ಎಂದು ಕರೆಕೊಡುತ್ತಾರೆ.

ಕೆ ಎಸ್ ನರಸಿಂಹಸ್ವಾಮಿ : 'ಬಹುಕಾಲದಿಂದ ಎದೆಯಲ್ಲಿ ಕುದಿದ ಕನ್ನಡಿಗರಾಸೆ ಫಲಿಸಿ ಒಂದಾದ ನಾಡು ಅಡಿಯಾದ ಹೆಸರ ಮಣಿಪದಕವನ್ನು ಧರಿಸಿ' ಎನ್ನುತ್ತಾರೆ

ಎನ್ ಎಸ್ ಲಕ್ಷ್ಮೀನಾರಾಯಣ ಭಟ್ : ' ಜಯ ಜಯ ಜಯ ಜಯ ಕನ್ನಡ ರಾಜೇಶ್ವರಿ ಶರಣು ಬಂದೆ ಪಾದಕೆ ಭುವನೇಶ್ವರಿ' ಎಂದೆನ್ನುತ್ತಾರೆ.

ಗೋಪಾಲ ಕೃಷ್ಣಡಿಗ : ಕನ್ನಡವೆಂದರೆ ತಾಯಿಯೆ ದೇವಿಯೆ ನಾನೂ ನೀನು ಅವರು' ಎನ್ನುತ್ತಾರೆ.

ಸಾ. ಶಿ ಮರುಳಯ್ಯ : 'ವೇಷಬೇರೆಭಾಷೆಬೇರೆ ದೇಶವೊಂದೇಭಾರತ. ಒಂದೇ ತಾಯಿಮಕ್ಕಳೆಂದು ಘೋಷಿಸೋಣ ಸತತ' ಎಂದುಹೇಳುತ್ತಾರೆ

ಡಾ ಸಿದ್ದಯ್ಯಪುರಾಣಿಕ : 'ಕರುನಾಡುನಿನ್ನದುಸಿರಿನಾಡುನಿನ್ನದು. ಹಿರಿನಾಡು ನಿನ್ನದು ಕನ್ನಡದ ಕುವರಾ' ಎಂದಿದ್ದಾರೆ.

ಬಿ ಪಂಪಣ್ಣ : 'ಭಾರತೆಯಕುವರಿ ನಮ್ಮ ಕನ್ನಡ ತಾಯಿನಮ್ಮನಾಡದೋ ಕಾಣು ಕರ್ನಾಟಕ' ಎಂದುಹೇಳುತ್ತಾರೆ.

ಶ್ರೀ ಗಂಗಾಧರ ನಂದಿ : 'ಭಾರತದನಾಡುಸಕಲರಿಗೂಬೀಡು. ಮಣ್ಣಿನಲಿ ಚಿನ್ನ ಕಾಣು' ಎನ್ನುತ್ತಾರೆ.

ರಾಘವೇಂದ್ರ ಇಟಗಿ : ' ಕನ್ನಡ ಎನ್ನಿರಿ ಭಾರತ ಎನ್ನಿರಿ. ಬೆಳಗಿನ ಒಳದನಿ ಒಂದೇ. ಭಾರತ ಪ್ರೀತಿಗೆ ಕನ್ನಡ ಮಲ್ಲಿಗೆ ಪರಿಮಳ ಬೀರುವದೊಂದೆ' ಎಂದುಹೇಳುತ್ತಾರೆ.

ಸೋಮಶೇಖರ ಇಮ್ರಾಪುರ : 'ಭಾರತೀಯರೆಲ್ಲನಾವು ಒಂದುಗೂಡುಹಾಡುವಾ. ಒಂದೇಭಾವ ಒಂದೇ ಜೀವವಾಗಿ ಬೇಧ ದೂಡುವಾ' ಎನ್ನುತ್ತಾರೆ.

ದ ರಾ ಬೇಂದ್ರೆ : ಮಕ್ಕಳಿವರೇನಮ್ಮ ? ಮಕ್ಕಳಿವರೇನಮ್ಮ ? ಮೂವತ್ತು ಮೂರು ಕೋಟಿ ನಾ ಹಡೆದ ಮೂವತ್ತು ಮೂರು ಕೋಟಿ' ಎಂದುಹೇಳುವಮೂಲಕಭಾರತಾಂಬೆಯಮಕ್ಕಳು ಎಷ್ಟು ಎಂದು ಕಣ್ಣೀರುಸುರಿಸುವಸಂದರ್ಭವನ್ನು ಕಾಣುತ್ತೇವೆ.

ಹೀಗೆ ರಾಷ್ಟ್ರೀಯ ಬಗ್ಗೆ ಕನ್ನಡ ನಾಡು ನುಡಿಯ ಬಗ್ಗೆ ಕನ್ನಡದ ಅನೇಕ ಕವಿಗಳು ಅನೇಕ ಕವನಗಳನ್ನು ನೀಡುವ ಮೂಲಕ ಅಭಿಮಾನದ ಕಿಚ್ಚನ್ನು ಹಚ್ಚಿಸುವ ಕಾಯಕವನ್ನು ಮಾಡಿದ್ದಾರೆ. ಎಲ್ಲರನ್ನು ಒಂದುಗೂಡಿಸುವ ಮತ್ತು ಹೆಚ್ಚರಿಸುವ ಕೆಲಸವನ್ನು ಕವಿಗಳು ಮಾಡಿದ್ದಾರೆಂದರೆ ಅಭಿನಂದಸಲೇಬೇಕು.

**ಆಧಾರ ಗ್ರಂಥಗಳು:**


1. ಹೊಸಗನ್ನಡ ಸಾಹಿತ್ಯ ಚರಿತ್ರೆ ಶೇಷಗಿರಿ ರಾವ್

2.ಕನ್ನಡ ಸಾಹಿತ್ಯ ಚರಿತ್ರೆ ರಂಶ್ರೀ ಮುಗಳಿ

3 ಹೊಸಗನ್ನಡದ ಅರುಣೋದಯ ಶ್ರೀನಿವಾಸಹಾವನೂರು

4 ಭಕ್ತಿಗೀತೆಗಳು, ನಾಡಗೀತೆಗಳು ಸಂಗ್ರಹ



**Prof. S. V. Halse**
Honourable Vice-Chancellor

**Davangere University**
Shivagangotri-577007.

## MESSAGE

I am delighted to know that the Department of History has organized two day national seminar on the occasion of decennial year celebration. The theme selected for the deliberation is of contemporary relevance across the globe. The edited Volume entitled **"History and Historiography of India: Challenges in Rewriting the History"** is a collection of selected best articles to be presented in the seminar. This Kind of Research based books are instrumental in the progress of cognition of the readers around the world.

Scientific thoughts, meaningful debates, new questions worthy of research and the opinion which are expressed through mutual conversation are going through intellectual process. The department of History through this momentous intellectual activity has provided eloquent stage to the students and scholars to express their viewpoints through research and thought process.

I would like to congratulate and wish great success to all those who are enthusiastically involved in this intellectual exercise and the editorial group who have organised the seminar and publishing this book. I am sure that the various stakeholders of the society will be benefited from this book.

(Prof. S. V. Halse)
Vice Chancellor
29th March, 2019

**DAVANGERE UNIVERSITY**

HISTORY AND HISTORIGRAPHY OF INDIA
9 789388 551021 01127>